# ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಚಿಕೆ ೫, ಅಕ್ಟೋಬರ್ 2013







Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು

ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

## ಚಿಲುಮೆಯ ಒಳಗೆ


ಸಿಡ್ನಿ ಗಣೇಶೋತ್ಸವ - ವರದಿ ... ಪು. ೧
“ತಲ್ಲಣ” ಚಲನಚಿತ್ರ ವರದಿ ... ಪು. ೨
ಸಂಪಾದಕೀಯ ... ಪು. ೩
ತವರಿನ ಸುದ್ದಿ ... ಪು. ೩
ಮಾಸ್ಟರ್ ಹಿರಣ್ಣಯ್ಯ ಲೇಖನ ... ಪು. ೪
ಆರೋಗ್ಯ ... ಪು. ೬
ರಾಂ ರಾಮ! ಹಾಸ್ಯ ... ಪು. ೭
ರೀ ರೆಸಿಪಿ ಕೊಡ್ತೀರಾ! ... ಪು. ೯
ಕಥಾ ಚಿಲುಮೆ ... ಪು. ೯
ಕಾವ್ಯ, ಹಾಸ್ಯ ... ಪು. ೧೦
ಗೊಂಬೆ ಹರಟೆ ... ಪು. ೧೧
ಪುಸ್ತಕ ವಿಮರ್ಶೆ ... ಪು. ೧೨
ಪದ ಪುಂಜ /ರಂಗೋಲಿ ... ಪು. ೧೪
ಕ್ರೀಡೆ – ಕ್ರಿಕೆಟ್ ... ಪು. ೧೫
ಛಾಯಾ ಚಿಲುಮೆ ... ಪು. ೧೬
ಕರ್ನಾಟಕ ಸಂಗೀತದ ಬಗ್ಗೆ ... ಪು. ೧೭
ವಿಜ್ಞಾನ ಸತ್ಯ ... ಪು. ೧೯
ಅಲ್ಲಲ್ಲಿ ಏನೇನು ... ಪು. ೧೯

# ಸಿಡ್ನಿ ಗಣೇಶಾಯ ನಮಃ

ಸಿಡ್ನಿಯ ಫ್ರೆಂಡ್ಸ್ ಆಫ್ ಇಂಡಿಯಾ ಆಶ್ರಯದಲ್ಲಿ ನಡೆದ ಹದಿನೈದನೇ ವರ್ಷದ ಗಣೇಶೋತ್ಸವದ ಒಂದು ಪುಟ್ಟವರದಿ ಇಲ್ಲಿದೆ.

ಭಾಗಶಃ ಕನ್ನಡಿಗರೇ ಇರುವ ಈ ಸಂಸ್ಥೆಯಲ್ಲಿ ಇತ್ತೀಚೆಗೆ ಎಲ್ಲಾ ಭಾರತೀಯರೂ ಸೇರಿ ಪ್ರತಿ ವರುಷದಂತೆ ಮೂರುದಿನಗಳು ಸಂಭ್ರಮ ಸಡಗರದಿ ಸಾಗುವ ಗಣೇಶ ಹಬ್ಬ ಸಾರ್ವಜನಿಕರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಯಿತು. ಸುಂದರ  ಅಲಂಕಾರ, ತರಕಾರಿ ತಯಾರಿ, ಮರುದಿನದ ಪೂಜೆಗೆ ಸಜ್ಜು ಶುಕ್ರವಾರವೇ ಆರಂಭಗೊಂಡು ಮರುದಿನ ಬೆಳಿಗ್ಗೆ ಗಣಪತಿ ಪ್ರತಿಷ್ಠಾಪನೆ ಮತ್ತು ಮಕ್ಕಳಿಂದ ಗಣಪತಿಗೆ ಸಾಮೂಹಿಕ ಪೂಜೆ, ಸಂಗೀತ ಕಾರ್ಯಕ್ರಮ ಮಧ್ಯಾಹ್ನ ಊಟ ಎಲ್ಲವೂ ಸಾಂಗೋಪಾಂಗವಾಗಿ ನಡೆಯಿತು.ಮಕ್ಕಳಿಗೆ ಮಣ್ಣಿನ ಗಣೇಶ ಮಾಡುವ ಸ್ಪರ್ಧೆ ಕೂಡಾ ಏರ್ಪಡಿಸಲಾಗಿತ್ತು.ಪುಟ್ಟ ಕೈಗಳು ಚಿಕ್ಕ ಚಿಕ್ಕ ಗಣಪನ ಮೂರ್ತಿಗಳನ್ನು ಒತ್ತಿ ಒತ್ತಿ ಮಾಡಿ ಎತ್ತಿ ಹಿಡಿದು ಸಂತೋಷ ಪಟ್ಟರು.

ಸಂಜೆ ಶಾಸ್ತ್ರೀಯಸಂಗೀತದಿಂದ ನಾಂದಿಯಾದ ಸಾಂಸ್ಕೃತಿಕ ಕಾರ್ಯಕ್ರಮ ಭಾರತದೇಶದ ನಾನಾ ರಾಜ್ಯಗಳ ಶೈಲಿಯ ನೃತ್ಯಗಳು, ಎಲ್ ಇ ಡಿ ಪರದೆಯಲ್ಲಿ  ಮೂಡುತ್ತಿದ್ದ ಚಿತ್ರಗಳು ಕಾರ್ಯಕ್ರಮಕ್ಕೆ ಮೆರಗುತಂದಿತು. ನೆರೆದಿದ್ದ ಎಲ್ಲಾ ವೀಕ್ಷಕರಿಗೂ ಭೋಜನದ ವ್ಯವಸ್ಥೆ ನಡೆದಿತ್ತು.

ಭಾನುವಾರದ ದಿನ ಮುಂಜಾನೆ ನವದಂಪತಿಗಳು ಶ್ರೀ ಸತ್ಯನಾರಾಯಣ ದೇವರ ಪೂಜೆ ಮಾಡಿದರು, ಹೆಂಗಸರು ಸಾಮೂಹಿಕವಾಗಿ ಕುಳಿತು ಕುಂಕುಮಾರ್ಚನೆ ಮಾಡಿದರು.ಇದಾದ ನಂತರ ಬಾಲಸಂಸ್ಕಾರಕೇಂದ್ರದ ಮಕ್ಕಳಿಂದ ಸಂಸ್ಕೃತ/ಇಂಗ್ಲೀಷ್ ನಲ್ಲಿ ಪುಟ್ಟ ಪ್ರಹಸನ ನಡೆಸಿಕೊಟ್ಟರು. ಮಧ್ಯಾಹ್ನ ಭೋಜನದ ನಂತರ ಸ್ಥಳೀಯ ಬ್ಯಾಂಡ್ "ಯೂತ್ ಮೆಲೋಡಿಸ್" ಅವರಿಂದ ಕೆಲವು ಹಾಡುಗಳನ್ನು ಕುಳಿತು ಕೇಳುವ ಅವಕಾಶವಾಯಿತು. ನಂತರ ವಿಸರ್ಜನೆಗೆ ಮುನ್ನ ಗಣಪತಿಯಮುಂದೆ ಕುಣಿತ ಮಾಡಲು-ನೋಡಲು ಜನ ಕಿಕ್ಕಿರಿದು ತುಂಬಿದ್ದರು. ಸುಂದರವಾಗಿ ಅಲಂಕೃತಗೊಂಡಿದ್ದ ರಥದಲ್ಲಿ ಗಣಪತಿಯನ್ನು ಇಟ್ಟು ಜೈ ಜೈ ಘೋಷ ಕೂಗುತ್ತಾ ಮಣ್ಣಿನ ಮೂರ್ತಿಯನ್ನು ಲಿವರ್ಪೂಲ್ ನ ಸತ್ಯಂಘಾಟ್ ನಲ್ಲಿ ವಿಸರ್ಜಿಸಲಾಯಿತು. ಭಾನುವಾರದ ಮತ್ತೊಂದು ವಿಶೇಷವೆಂದರೆ ಭಾರತೀಯ ಹೆಣ್ಣುಮಗಳೊಬ್ಬಳ ಎರಡುವರ್ಷಕ್ಕಿಂತ ಕಡಿಮೆ ವಯಸ್ಸಿನ ಪುಟ್ಟ ಹೆಣ್ಣು ಮಗುವಿನ ಆರೋಗ್ಯ ಚಿಕಿತ್ಸೆಗಾಗಿ ಸ್ಥಳದಲ್ಲೇ ಸುಮಾರು ಎರಡು ಗಂಟೆಯ ಅವಧಿಯಲ್ಲಿ ನೆರೆದಿದ್ದ ಜನ $5000  ದಾನ ಮಾಡಿದ್ದು.

ವರ್ಷದಿಂದ ಮುನ್ನೋಡುತ್ತಿದ್ದ ಮೂರು ದಿವಸದ ಗಣೇಶೋತ್ಸವ ಕಾರ್ಯಕ್ರಮ  ಮೂರೇ ಗಂಟೆಗಳಲ್ಲಿ ಕಳೆಯಿತೇನೋ ಅನ್ನಿಸಿತು.▪







ವರದಿ ಮತ್ತು ಚಿತ್ರಗಳು: ಕನಕಾಪುರ ನಾರಾಯಣ

ವೀ ಕ್ಷಿ ಸಿ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದಾರ್ಶನಿಕತೆ ಬಗ್ಗೆ ಸಾಕ್ಷ್ಯ ಚಿತ್ರ ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

'ಬೇಂದ್ರೆಯವರೊಂದಿಗೆ ಸನ್ಮಾನ' - ಅನುಭವ ಲೇಖನ ಮಾಸ್ತರ್ ಮಾತಿನಲ್ಲಿ- ಪುಟ ೪



ಹಿಂದಿನ ದಿನಗಳ ಜಂಬು ಸವಾರಿ ಹೇಗಿರುತ್ತಿತ್ತು ಎಂದು ಕಾಣಲು ಚಿತ್ರ ಕ್ಲಿಕ್ ಮಾಡಿ (Click picture to view)

ಆ ನಂ ದಿ ಸಿ

# ಈಗಿನ ಸುದ್ದಿ-೨

## ತಲ್ಲಣ – ಚಲನ ಚಿತ್ರ ಪ್ರದರ್ಶನ ವರದಿ

ಇತ್ತೀಚೆಗಷ್ಟೇ ಸೊಗಸಾದ ಕನ್ನಡದ ಭರ್ಜರಿ ಯಶಸ್ಸಿನ ಸುದೀಪ್ ಅಭಿನಯದ ಬಚ್ಚನ್ ಚಿತ್ರದ ಸವಿಯನ್ನು ಅನುಭವಿಸಿದರು ನೂರಾರು ಸಿಡ್ನಿಯ ಕನ್ನಡ ಚಿತ್ರ ರಸಿಕರು. ಒಳ್ಳೆಯ ಕನ್ನಡ ಚಿತ್ರಗಳನ್ನು ದೊಡ್ಡ ಪರದೆಯ ಮೇಲೆ ನೋಡುವ ಕಾತುರತೆಯುಳ್ಳ ಸಿಡ್ನಿಯ ಪ್ರೇಕ್ಷಕರಲ್ಲಿ ಹೆಚ್ಚುಕಾತುರತೆಯನ್ನು ಉಂಟುಮಾಡಿದ್ದು ನಮ್ಮವರೇ ಆದ ಸಿಡ್ನಿಯ ಸ್ಥಳೀಯ ಪ್ರತಿಭಾವಂತ ನಿರ್ದೇಶಕ ಸುದರ್ಶನ್ ರವರು. ತಮ್ಮ ಮೊದಲ ಪ್ರಶಸ್ತಿ ವಿಜೇತ  ಕುತೂಹಲ ಭರಿತ  “ಮುಖಾಮುಖಿ”  ಚಿತ್ರದಿಂದ ಪ್ರೇಕ್ಷಕರಲ್ಲಿ ಹೆಚ್ಚು ನಿರೀಕ್ಷೆಯನ್ನು ಮೂಡಿಸಿದ್ದರು. “ಮುಖಾಮುಖಿ”  ಸುದರ್ಶನ್ ರವರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿತ್ತು. ಪ್ರೇಕ್ಷಕರನ್ನು ಚಿತ್ರದ ಕಥಾವಸ್ತುವಿನಲ್ಲಿ ಸಂಪೂರ್ಣವಾಗಿ ಕರೆದೊಯ್ಯುವ ಕಲೆಯನ್ನು ಸುದರ್ಶನ್ ಮತ್ತೊಮ್ಮೆ ಸಾಬೀತುಪಡಿಸಿದ್ದು ತಮ್ಮ ಎರಡನೇ ಚಿತ್ರ "ತಲ್ಲಣ"ದ ಮೂಲಕ.




ಸಾಮಾಜಿಕ ಜಾಲ ತಾಣ “facebook” ಮೂಲಕ "ತಲ್ಲಣ" ಚಿತ್ರ ಹೆಚ್ಚು ಪ್ರಚಾರ ಪಡೆದು ಜನರಲ್ಲಿ ಚಿತ್ರದ ವೀಕ್ಷಣೆಗಾಗಿ ಕುತೂಹಲ ಮೂಡಿಸಿತ್ತು. ಕರ್ನಾಟಕದಲ್ಲಿ ಚಿತ್ರೀಕರಣ ಮುಗಿಸಿ ಹಾಗು ಸಂಕಲನ ಮುಗಿಸಿ ತೆರೆಗೆ ಸಿದ್ದವಾಗಿತ್ತು. ಸೆಪ್ಟೆಂಬರ್ ೨೨ ಭಾನುವಾರದಂದು ಮಧ್ಯಾಹ್ನ ೩ ಮತ್ತು ೬ ಘಂಟೆಗೆ Hurstville Civic Theatre ನಲ್ಲಿ ಎರಡು ಪ್ರದರ್ಶನಗಳನ್ನು ಆಯೋಜಿಸಲಾಗಿತ್ತು. ಸುದರ್ಶನ್ ರ  “ಮುಖಾಮುಖಿ” ಚಿತ್ರ ನೋಡಿದವರಲ್ಲಂತೂ "ತಲ್ಲಣ" ಚಿತ್ರದ ಬಗ್ಗೆ ಎಲ್ಲಿಲ್ಲದ ಕುತೂಹಲ ಚಿತ್ರ ಮಂದಿರದ ಹೊರಗೆ ಕಾಯುತ್ತಿದ್ದವರಲ್ಲಿ ಎದ್ದು ಕಾಣುತ್ತಿತ್ತು. ೩ ಘಂಟೆಯ ಪ್ರದರ್ಶನಕ್ಕೆ ಚಿತ್ರಮಂದಿರ ಬಹುತೇಕ ಭರ್ತಿಯಾಗಿತ್ತು.



ವಾಸ್ತವಕ್ಕೆ ಹತ್ತಿರವಾದ ಮೊನಚಾದ ನಿರೂಪಣೆ, ಸಹಜವಾದ ಅಭಿನಯ, ಸ್ಥಳೀಯ ಸೊಗಸನ್ನು ಬಿಂಬಿಸುವ ಛಾಯಾಗ್ರಹಣ ಮತ್ತು ಜನರಲ್ಲಿ ಆಸಕ್ತಿ ಕೆರಳಿಸಿ ಮುಂದೇನು ಎಂಬ ಕುತೂಹಲ ಕಾಯ್ದಿರಿಸಿಕೊಳ್ಳುವ ಕಥಾವಸ್ತು ಹೀಗೆ ಚಿತ್ರದ highlights. ಇಷ್ಟು ವರ್ಷಗಳಾದರೂ ಸಮಾಜದಲ್ಲಿ ತೊಲಗದ ಲಿಂಗ ತಾರತಮ್ಯವನ್ನು ಹಾಗು ಸುಶಿಕ್ಷಿತರ ಬೇಜವಾಬ್ದಾರಿತನವನ್ನು ಗಾರ್ಗಿಯ ಸುತ್ತ ಹೆಣೆದ ಪಾತ್ರಗಳಲ್ಲಿ ಪರಿಣಾಮಕಾರಿಯಾಗಿ ನಿರೂಪಣೆಗೊಂಡಿದೆ.



ಒಂದು ಹೆಣ್ಣು ಮಗಳು ಮತ್ತು ತಾಯಿಯ ಒಡನಾಟ, ತಾಯಿಯ ಪ್ರೀತಿ, ತನ್ನ ಮಗಳಿಗಾಗಿ ಆಕೆಯ ಮನದಾಳದ ತುಡಿತ ಎಲ್ಲವನ್ನೂ ಸಹಜವಾಗಿ ಚಿತ್ರಿಸಲಾಗಿದೆ. ಎರಡು ಅರ್ಥವತ್ತಾದ ಸೊಗಸಾದ ವಚನಾಧಾರಿತ ಹಾಡುಗಳನ್ನೊಳಗೊಂಡ ಚಿತ್ರ, ನೋಡುಗರನ್ನು ಶರಣರ ಅರ್ಥಗರ್ಭಿತ ವಾಕ್ಯವನ್ನು ಮೆಲುಕುಹಾಕುವಂತೆ ಮಾಡುತ್ತದೆ.  ಎಲ್ಲರ ಮನದಲ್ಲಿ ಚಿತ್ರ ಮುಗಿದ ಮೇಲೂ ಸುಷ್ಮಾ ಎಲ್ಲಿ? ಎಂಬ ಪ್ರಶ್ನೆ ಹಾಗೇ ಉಳಿದು ಜನರನ್ನು ತಮ್ಮ ಯೋಚನಾ ಪ್ರಪಂಚಕ್ಕೆ ಕರೆದೊಯ್ಯುತ್ತದೆ.  ಒಟ್ಟಾರೆ ಮತ್ತೊಂದು ಪ್ರಶಸ್ತಿಗೆ ಅರ್ಹ ಚಿತ್ರದಂತಿದೆ.

ಚಿತ್ರ ಮುಗಿದ ನಂತರ ನಿರ್ದೇಶಕ ಸುದರ್ಶನ್ ಪ್ರೇಕ್ಷಕರನ್ನುದ್ದೇಶಿಸಿ ಮಾತನಾಡಿ ಚಿತ್ರದ ನಿರ್ಮಾಣಕ್ಕೆ ಹಾಗೂ ಪ್ರದರ್ಶಕ್ಕೆ ನೆರವಾದವರೆಲ್ಲರಿಗೂ ಅಭಿನಂದನೆ ಸಲ್ಲಿಸಿದರು. ಚಿತ್ರ ಮುಗಿದ ನಂತರ ಸಾಮಾನ್ಯವಾಗಿ ಮೂಡುವ ಪ್ರಶ್ನೆಗಳು ಹಾಗೇ ಉಳಿಯುತ್ತವೆ. ಆದರೆ ಅಂತಹ ಪ್ರಶ್ನೆಗಳನ್ನು ಹಾಗು ತಮ್ಮ ಅನಿಸಿಕೆ, ಪ್ರಶಂಸೆಗಳನ್ನೂ ಚಿತ್ರ ನೋಡಿದವರೆಲ್ಲ ಸುದರ್ಶನ್ ರವರೊಂದಿಗೆ ಅಲ್ಲೇ ಹಂಚಿಕೊಂಡರು. ಆಗಲೇ ೬ ಘಂಟೆಯ ಪ್ರದರ್ಶನಕ್ಕೆ ಜನ ಕಾದು ನಿಂತಿದ್ದರು.



ಅಕ್ಟೋಬರ್ ೧೩ ರಂದು Adelaide ನಗರದಲ್ಲೂ ಸಹ ಮಧ್ಯಾಹ್ನ ೩ಘಂಟೆಗೆ ಚಿತ್ರ ಪ್ರದರ್ಶನವನ್ನು Mercury Cinemas  ನಲ್ಲಿ ಅಯೋಜಿಸಲಾಗಿದೆ. ಸಿಡ್ನಿಯಿಂದ ಪ್ರಾರಂಭವಾಗಿ ಮೆಲ್ಬೋರ್ನ್, ಅಡಿಲೇಡ್ ಹೀಗೆ ಇತರ ನಗರಗಳಲ್ಲಿ ಹರಡಿ ನಮ್ಮ ಸ್ಥಳೀಯ ಪ್ರತಿಭೆಗಳಿಗೆ ಎಲ್ಲೆಡೆ ಮನ್ನಣೆ ಸಿಗಲಿ ಹಾಗು ಕನ್ನಡ ಪ್ರೇಕ್ಷಕರಿಗೆ ಒಳ್ಳೆಯ ಚಿತ್ರಗಳು ಸಿಗುವಂತಾಗಲಿ.▪

ವರದಿ: ನಾಗೇಂದ್ರ ಅನಂತಮೂರ್ತಿ

ಚಿತ್ರಗಳು: ಎನ್. ಸುದರ್ಶನ್

# ಸಂಪಾದಕೀಯ



ಬದರಿ ತ್ಯಾಮಗೊಂಡ್ಲು

ಶಕ್ತಿಯ ಆರಾಧನೆಯ ಸಮಯವಿದು. ಹೆಣ್ಣನ್ನು ಶಕ್ತಿಯ ಸಂಕೇತ ಎಂದು ಪೂಜಿಸುತ್ತೀವಿ. ಇಚ್ಛಾ ಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾ ಶಕ್ತಿಯ ಸ್ವರೂಪಿಣಿ ಎಂದು ಆರಾಧಿಸುತ್ತೀವಿ. ಹಾಗಾದರೆ ಈ ಶಕ್ತಿಯು ಕೇವಲ ಸ್ತ್ರೀ ತತ್ವಕ್ಕೆ ಮಾತ್ರ ಸೀಮಿತವೇ? ನಿಜ, ಧಾರ್ಮಿಕವಾಗಿ ನೋಡಿದಾಗ ಇದಕ್ಕೆ ಪುಷ್ಟಿ ಕೊಡಬಲ್ಲ ಅನೇಕ ಆಧಾರಗಳು ಸಿಗುತ್ತವೆ. ಆ ಚೌಕಟ್ಟಿನ ಹೊರಗೆ ಬಂದು ಧರ್ಮಾಧರ್ಮ, ತತ್ವಗಳ ಎಲ್ಲೆ ಮೀರಿ ಯೋಚಿಸಿ ನೋಡುವ ಪ್ರಯತ್ನ ಮಾಡೋಣವೇ!

ಶಕ್ತಿ ಅನ್ನುವುದು ಸಂಸ್ಕೃತ ಪದ. ಶಕ್ ಧಾತು ಇದಕ್ಕೆ ಮೂಲ. ಶಕ್ ಅಂದರೆ "ಸಾಧ್ಯವಾಗುವಂತೆ" ಎಂಬ ಅರ್ಥ. ಹೀಗಾಗಿ ಶಕ್ತಿ ಅಂದರೆ "ಸಾಧ್ಯವಾಗುವಂತೆ ಮಾಡುವ" ಎನ್ನುವುದಕ್ಕೆ ಸಮಾನಾರ್ಥಕ ಪದ ಎಂದು ತಿಳಿಯಬಹುದು. ಈ ಹಿನ್ನಲೆಯಲ್ಲಿ ನೋಡಿದಾಗ, ನಾವು ದಿನನಿತ್ಯ ಮಾಡುವ ಎಲ್ಲ ಕೆಲಸಗಳಿಗೂ ಒಂದು ಪ್ರೇರಣೆ ಮತ್ತು ಚೈತನ್ಯ ಬೇಕು. ಅಂತಹ ಒಂದು ಉತ್ಸಾಹದ ಚಿಲುಮೆ ನಮ್ಮಲ್ಲಿ ಇಲ್ಲ ಎಂದಾದಲ್ಲಿ, ಮಾಡುವ ಎಲ್ಲ ಕೆಲಸವೂ ಆಗಿ ಬರುತ್ತಿಲ್ಲವೇನೋ ಎಂದು ಭಾಸವಾಗುತ್ತದೆ. ಇಂತಹ ಅನುಭವ ನಿಮಗೆ ಆಗಿರಬಹುದು. ಹಾಗಾದರೆ ಅದು ಯಾವುದೋ ಕಾಣದ ದೈವದ ಕೋಪವೇ ನಮ್ಮ ಮೇಲೆ ಅಥವಾ ಸಾಮಾನ್ಯವಾಗಿ ಎಲ್ಲೆಡೆ ಕೇಳಿಬರುವ ಗ್ರಹಚಾರ ಫಲವೋ? ದೈವದ ನಂಬಿಕೆ ಅವರವರಿಗೆ ಬಿಟ್ಟ ವಿಚಾರ. ಅಂತಹುದೇ ಇನ್ನೊಂದು ವಿಚಾರ "ಆತ್ಮಾವಲೋಕನ" ಕೂಡ. ಇದನ್ನು ಯಾರೂ ಅನುಗ್ರಹಿಸಲಾರರು. ನಮ್ಮನ್ನು ಯಾವ ಶಕ್ತಿ ಹುರಿದುಂಬಿಸಬಲ್ಲದು? ನಮ್ಮಲ್ಲಿ ಯಾವ ಶಕ್ತಿ ಜಾಗೃತವಾಗಿದ್ದರೆ ಈ ಕೆಲಸ ಬೇಗ ಆಗುತ್ತದೆ, ಇತ್ಯಾದಿ. ಇದನ್ನು ನಾವೇ ಅಂತರ್ಮನಸ್ಕರಾಗಿ ಯೋಚಿಸಿ ಕಾಣಬೇಕು. ಶಂಕರಾಚಾರ್ಯರ ಸೌಂದರ್ಯಲಹರಿಯ ಪ್ರಥಮ ಶ್ಲೋಕವೇ "ಶಿವಃ ಶಕ್ತ್ಯಾ ಯುಕ್ತೋ ..." ಎಂದು. ಅರ್ಥಾತ್ ಶಕ್ತಿಯು ಜೊತೆಗೆ ಇಲ್ಲದಿದ್ದರೆ ಶಿವನೇನೂ ಮಾಡಲಾರ ಎಂದು. ಇಲ್ಲಿ ಶಿವ ಪುರುಷನೆಂದೂ ಮತ್ತು ಶಕ್ತಿಯು ಸ್ತ್ರೀ ಎಂದು ನೋಡುವುದಕ್ಕಿಂತ, ನಮ್ಮ ಆಂತರ್ಯದಲ್ಲಿ ನಾವು ಶಕ್ತಿಯ ಸ್ಥಾಪನೆ ಮಾಡದೇ ಹೋದರೆ ಏನೂ ಸಾಧಿಸಲು ಸಾಧ್ಯವಿಲ್ಲ ಎಂದು ತಿಳಿಯುವ ಅಗತ್ಯ ಇದೆ. ನಮ್ಮನ್ನು ನಿತ್ಯ ಕ್ರಿಯಾಶೀಲರಾಗುವಂತೆ ಮಾಡುವ ಅಂತಹ ಸತ್ವಯುತವಾದ ಆ ಶಕ್ತಿಯ ಕುರುಹನ್ನು ಒಮ್ಮೆ ಕಣ್ಮುಚ್ಚಿ ನಮ್ಮೊಳಗೇ ಹುಡುಕೋಣವೇ! ▪

## ಕರ್ನಾಟಕದ ವೈಶಿಷ್ಟ್ಯಗಳು



ಹೆಸರು ಮೈಸೂರು ದಸರವಾದರೂ, ಈ ಹಬ್ಬವನ್ನು ಆರಂಭಿಸಿದವರು ವಿಜಯನಗರದ ಅರಸರು. ನಂತರ ಮೈಸೂರು ಒಡೆಯರು ಈ ಹಬ್ಬಕ್ಕೆ ಮತ್ತಷ್ಟು ಮೆರುಗನ್ನು ಕೊಟ್ಟರು



ಮಧುಗಿರಿ ದಾಳಿಂಬೆಗೆ ಪ್ರಸಿದ್ಧಿ. ಹಾಗೆ ಇಲ್ಲಿರುವ ಬೆಟ್ಟ ಏಷ್ಯಾದಲ್ಲೇ ಎರಡನೇ ಅತಿ ಎತ್ತರದ ಏಕಶಿಲಾ ಬೆಟ್ಟವಾಗಿದೆ. ಇದು ೩೯೩೦ ಅಡಿ ಎತ್ತರವಾಗಿದ್ದು ಚಾರಣಿಗರಿಗೆ ಪ್ರಿಯವಾಗಿದೆ




ಭಾರತದ ಪ್ರಥಮ ಆಕಾಶವಾಣಿ ಕೇಂದ್ರ (ರೇಡಿಯೋ) ಮೈಸೂರಿನಲ್ಲಿ ಸೆಪ್ಟೆಂಬರ್ 10, 1935 ರಂದು ಉಪನ್ಯಾಸಕರಾದ ಎಂ.ವಿ.ಗೋಪಾಲಸ್ವಾಮಿ ಅವರ ಮನೆಯಲ್ಲಿ ಶುರುವಾಯಿತು.

## ತವರಿನ ಸುದ್ದಿ

### ಕರ್ನಾಟಕ ಮತ್ತು ಭಾರತ ದೇಶದ ಮುಖ್ಯಾಂಶಗಳು - ಸೆಪ್ಟೆಂಬರ್ ೨೦೧೩

- ✓ ಬಿ.ಜೆ.ಪಿ ಯಿಂದ ಪ್ರಧಾನಿ ಅಭ್ಯರ್ಥಿ ಎಂದು ನರೇಂದ್ರ ಮೋದಿ ಘೋಷಣೆ
- ✓ ದೆಹಲಿ ಅತ್ಯಾಚಾರ ಪ್ರಕರಣ: ತಪ್ಪಿತಸ್ಥರಿಗೆ ಮರಣ ದಂಡನೆ. ಬಚಾವಾದ ಬಾಲಾಪರಾಧಿ
- ✓ ಐತಿಹಾಸಿಕ ವಿದುರಾಶ್ವತ್ಥದ ಮರ ಮಳೆಯಿಂದ ಧರೆಗುರುಳಿತು
- ✓ ಮೋದಿ ಆಳುವ ನಾಡಲ್ಲಿ ಬದುಕಲಾರೆ ಎಂದ ಸಾಹಿತಿ ಅನಂತಮೂರ್ತಿ
- ✓ 5000 ಕಿ. ಮಿ. ತಲುಪುವ ಸಾಮರ್ಥ್ಯದ ಅಗ್ನಿ-5 ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆ ಯಶಸ್ವಿ
- ✓ ಡಾ|| ರಾಜ್ ಕುರಿತ ಕೃತಿ ಬ್ರಿಟಿಷ್ ಲೈಬ್ರರಿಗೆ
- ✓ ಆಧಾರ್ ಕಾರ್ಡ್ ಎಲ್ಲದಕ್ಕೂ ಅಗತ್ಯ ಅಲ್ಲ ಎಂದ ಸುಪ್ರೀಂ ಕೋರ್ಟ್
- ✓ ಮತದಾರರಿಗೆ ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕು ನೀಡಿದ ಸುಪ್ರೀಂ ಕೋರ್ಟ್

# ಮಾಸ್ಟರ್ ಮಾತು



ಮಾಸ್ಟರ್ ಹಿರಣ್ಣಯ್ಯ

ಲಂಚಾವತಾರ ಖ್ಯಾತಿಯ ಹಿರಿಯ ರಂಗಭೂಮಿ ಕಲಾವಿದರು

# ಬೇಂದ್ರೆಯವರೊಂದಿಗೆ ಸನ್ಮಾನ - ಭಾಗ ೧

ಸರ್ಕಾರೀ ನೌಕರರ ಸಂಘದ (ಆಗ ಎನ್.ಜಿ.ಓ.ಸ್ ಅಸೋಸಿಯೇಷನ್ ಎಂದಿತ್ತು) ಅಧ್ಯಕ್ಷನಾಗಿದ್ದ ದಿ|ಕೇಶವಮೂರ್ತಿ ನನ್ನ ಬಾಲ್ಯ ಸ್ನೇಹಿತ-ವಿದ್ಯಾರ್ಥಿ ಸಹಪಾಟಿ-ಮೈಸೂರಲ್ಲಿ ಒಟ್ಟಿಗೆ ಆಡಿ ಬೆಳೆದವರು. ಕಲಾವಿದನಾದ ನನ್ನ ಬಗ್ಗೆಯಂತೂ ಅವನಿಗೆ ಅವಿಸ್ಮರಣೀಯವಾದ ಗೌರವ. ಆವೇಳೆಗಾಗಲೇ ಅವನು ನನ್ನ ವಿಶ್ವಾಸ, ಸ್ನೇಹ, ಸಲಿಗೆಯನ್ನು ಬಳಸಿಕೊಂಡು ನಾನು ಮೊಕ್ಕಾಂ ಹೂಡುತ್ತಿದ್ದ ಊರೂರುಗಳಲ್ಲೂ ತನ್ನ ಸಂಘಕ್ಕೆ ಸಹಾಯಾರ್ಥ ನಾಟಕಗಳನ್ನಾಡಿಸಿಕೊಂಡು, ಎನ್.ಜಿ.ಒ.ಸ್ ಬಿಲ್ಡಿಂಗ್, ಎನ್.ಜಿ.ಒ.ಸ್ ನಿಧಿ, ಮುಂತಾದವುಗಳಿಗೆ ವಿನಿಯೋಗಿಸಿ ನನ್ನ ಹಾಗೂ ತನ್ನ ಹೆಸರನ್ನು ಎಲ್ಲೆಡೆ ಹರಡಿಸಿದ್ದ ಹಾಗೂ ನನ್ನ ಸೇವಾ ಕೈಂಕರ್ಯವನ್ನು ಸರ್ಕಾರಕ್ಕೆ ಮುಟ್ಟಿಸಿ, ನನ್ನನ್ನು ಸರ್ಕಾರದ ದೃಷ್ಟಿಯಲ್ಲಿ ಉನ್ನತ ಮಟ್ಟಕ್ಕೆ ಏರಿಸಿದ್ದ. ತನ್ನ ಅಧ್ಯಕ್ಷಗಿರಿಯ ಕಾಲದಲ್ಲೇ ಸರ್ಕಾರದ ಮಟ್ಟದಲ್ಲಿ, ಸರ್ಕಾರೀ ನೌಕರರ ಸಂಘದವತಿಯಿಂದ, ನನಗೊಂದು ಅದ್ದೂರಿ ಸನ್ಮಾನವನ್ನು ಮಾಡಲೇ ಬೇಕೆಂದು ನಿರ್ಧರಿಸಿ, ಸಮಯಕ್ಕಾಗಿ ಕಾಯುತ್ತಿದ್ದ.

ಜೊತೆಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಡಿ. ದೇವರಾಜ ಅರಸು ರವರಿಗೂ, ನನಗೂ ಬಹಳ ಹತ್ತಿರದ ನೆಂಟಿತ್ತು. ಅದಕ್ಕೆ ಕಾರಣ ಅನೇಕ- ಅದರಲ್ಲಿ ಮುಖ್ಯವಾದದ್ದು, ಆಗಿನ ಮೈಸೂರು ಅರಸರಾಗಿದ್ದ ಶ್ರೀಮನ್ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರು, ನನ್ನನ್ನು 1962ರಲ್ಲಿ ಆಹ್ವಾನಿಸಿ, ಜಗನ್ಮೋಹನ್ ಪ್ಯಾಲೆಸ್ನಲ್ಲಿ ನಮ್ಮ 14 ನಾಟಕಗಳನ್ನು ವೀಕ್ಷಿಸಿ, ದಸರಾ ದರ್ಬಾರಿನಲ್ಲಿ ಬಿರುದು-ಬಾವಲಿಗಳ ಸಹಿತ ನನಗೆ ಬಂಗಾರದ ರತ್ನಖಚಿತ ಗಂಡಬೇರುಂಡ ಸರವನ್ನಿತ್ತು ಗೌರವಿಸಿದ್ದರು. ಅಂದಿನಿಂದ ಮೈಸೂರು ಅರಮನೆಗೂ, ನನಗೂ ಬಲವಾದ ನೆಂಟು-ಗಂಟು. ದೇವರಾಜ ಅರಸು ರವರು ಮಹಾರಾಜರ ಸೋದರರು. ಹೀಗಾಗಿ ಅರಸುಗಳ ಮನೆತನಕ್ಕೂ, ನಮ್ಮ ಮನೆತನಕ್ಕೂ ಅವಿನಾಭಾವ ಸಂಬಂಧ ಇದ್ದ ಕಾರಣ, ನನಗೆ ಸರ್ಕಾರದ ಮಟ್ಟದಲ್ಲಿ ಅದ್ದೂರಿಯಾದ ಸನ್ಮಾನಕ್ಕೆ ಅವರ ಒಪ್ಪಿಗೆಗೆ ತಡವಾಗಲೇ ಇಲ್ಲ. ಕೇಶವಮೂರ್ತಿ ಕಾಯುತ್ತಿದ್ದ ಸಕಲಾವೂ ಬಂತು. ಅವರ ಸಂಘದ ಜನ್ಮದಿನಾಚರಣೆಯನ್ನು, ಹುಬ್ಬಳ್ಳಿ-ಧಾರವಾಡದಲ್ಲಿ ಮೂರು ದಿನ ನಡೆಸಬೇಕೆಂದೂ, ಮೊದಲ ದಿನ ಡಾ|ದ.ರಾ.ಬೇಂದ್ರೆಯವರನ್ನು ಗೌರವಿಸಿ, ಎರಡನೆಯ ದಿನ ನನ್ನನ್ನೂ ಸನ್ಮಾನಿಸಿ, ಮೂರನೆಯ ದಿನ ಸಮಾರೋಪ ಮಾಡುವುದೆಂದೂ ನಿರ್ಧಾರವಾಯ್ತು.

ಎಲ್ಲಾ ತಯಾರಿಗಳೂ ಬಹಳ ಜೋರಾಗೇ ಆರಂಭವಾಯ್ತು. ಧಾರವಾಡ ಶಾಲಾ ಆವರಣದಲ್ಲಿ ಮೂರು ಸಾವಿರಕ್ಕೂ ಮಿಕ್ಕಿ ಜನ ಕೂರುವಷ್ಟು ಷಾಮಿಯಾನ- ಕುರ್ಚಿಗಳು. ಕಣ್ಣು ಕೋರೈಸುವಂಥಾ ವಿದ್ಯುದಲಂಕಾರ. ನಭೂತೋ ನಭವಿಶ್ಯತಿ ಎನ್ನುವಂಥಾ ರಂಗಸಜ್ಜಿಕೆ ಹೊತ್ತ ರಂಗವೇದಿಕೆ, ಇಡೀ ಮಂತ್ರಿ ಮಂಡಲವೇ ಬರುತ್ತಿದೆ ಎಂದ ಮೇಲೆ, ಪ್ರಚಾರ-ಸಿಬ್ಬಂದಿಗಳಿಗೆ ಕೊರತೆಯೇ? ಒಂದು ರೀತಿಯಲ್ಲಿ ಐ ಕಾಂಗ್ರೆಸ್ಸಿಗೆ, ಆ ಭಾಗದಲ್ಲಿ ಬಹು ದೊಡ್ಡ ಪ್ರಚಾರಕ್ಕೆ ಅದು ಭೂಮಿಕೆಯಾಯ್ತು. ಮೊದಲ ದಿನ (ಎರಡನೇ) ಶನಿವಾರವಾದುದರಿಂದ ರಜೆ, ಎರಡನೆಯ ದಿನ ಇನ್ನೇನು ಭಾನುವಾರ, ಮೂರನೆಯ ದಿನ ಸೋಮವಾರ, ಸರ್ಕಾರವೇ ರಜೆಯನ್ನು ಘೋಷಿಸಿತ್ತು. ಇಡೀ ಊರೇ ಹಬ್ಬದ ವಾತಾವರಣದಲ್ಲಿ ಮಿಂದು-ಮೆರೆಯುತ್ತಿತ್ತು. ಅತಿಥಿಗಳಿಗೆ ಹುಬ್ಬಳ್ಳಿಯ ಹೋಟೆಲ್‌ಗಳಲ್ಲೆಲ್ಲಾ ಊಟ, ವಸತಿಗಳ ಏರ್ಪಡಾಗಿತ್ತು. ಕೇಶವಮೂರ್ತಿಯ ಬಲವಂತಕ್ಕೆ, ನಾನು ಅವನ ಜೊತೆಯೇ, ಒಂದು ದಿನ ಮುಂಚಿತವಾಗಿ ಹುಬ್ಬಳ್ಳಿಗೆ ಬಂದಿದ್ದೆ.

ಕಾರ್ಯಕ್ರಮ, ಶನಿವಾರ ಬೆಳಗ್ಗೆ 10.40ಕ್ಕೆ ಅಧ್ಯಕ್ಷನಾದ ಕೇಶವಮೂರ್ತಿ ದೀಪ ಬೆಳಗುವ ಮೂಲಕ ಇಡೀ ಸಮಾರಂಭಕ್ಕೆ ಚಾಲನೆ ನೀಡಿ, ನಂತರ ನೌಕರರ ಕುಂದು-ಕೊರತೆಗಳ ಬಗ್ಗೆ, ಸರ್ಕಾರದ ಮುಂದೆ ಅವರು ಇಡಬೇಕಾಗಿದ್ದ ಕೋರಿಕೆಗಳ ಬಗ್ಗೆ ಚರ್ಚೆ. ಮಧ್ಯಾಹ್ನ ಭರ್ಜರಿ ಉತ್ತರಕರ್ನಾಟಕದ ವಿಶೇಷ-ಜೋಳದ ರೊಟ್ಟಿ ಊಟ, ಆನಂತರ ಅಲ್ಪ ವಿರಾಮ. ಸಂಜೆ ೬ಕ್ಕೆ ಬೇಂದ್ರೆ ಅಜ್ಜನವರಿಗೆ ಸನ್ಮಾನ. ಮಾರನೆಯ ದಿನ-ಭಾನುವಾರ ಬೆಳಗಿನ ಸಮಾವೇಶ, ಕರಡು ನಿರ್ಣಯದ ರೂಪುರೇಷೆ- ವಿರಾಮ. ಸಂಜೆ ೬ಕ್ಕೆ ನನಗೆ ಸನ್ಮಾನ. ಸೋಮವಾರ ಬೆಳಗ್ಗೆ ಹೊರಗಿನಿಂದ ಬಂದಿದ್ದ ನೌಕರರಿಗೆ, ಆಸು ಪಾಸಿನ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿಬರಲು ವಿರಾಮ- ವ್ಯವಸ್ಥೆ. ಸಂಜೆ ೬ಕ್ಕೆ ಸಮಾರೋಪ, ಮುಖ್ಯಮಂತ್ರಿಗಳಿಗೆ ಬೇಡಿಕೆಗಳ ಪಟ್ಟಿ ನೀಡಿಕೆ, ನಿವೃತ್ತರಾಗಲಿರುವ ಹಾಗೂ ನಿಷ್ಠಾವಂತ ನೌಕರರಿಗೆ ಸನ್ಮಾನ, ವಂದನಾರ್ಪಣೆ.

ಶನಿವಾರ ಕಾರ್ಯಕ್ರಮದಂತೆ ಬೆಳಗಿನದೆಲ್ಲವೂ ಸಾಂಗೋಪಾಂಗವಾಗಿ ನಡೆಯಿತು. ಸಂಜೆಯ ಆ ಅಭೂತಪೂರ್ವ, ಕನ್ನಡ ಕಣ್ಮಣಿಯ ಸನ್ಮಾನದ ವೀಕ್ಷಣೆಗೆ ಅವಳಿ ನಗರದವರಲ್ಲದೇ, ಸುತ್ತು ಮುತ್ತಲಿನ ಗದಗ, ನವಲುಗುಂದ, ನರಗುಂದ ಮುಂತಾದ ಗ್ರಾಮಾಂತರದ ಜನ ಸಮೂಹವೆಲ್ಲಾ, ಮಧ್ಯಾನ್ಹದಿಂದಲೇ ಬಂದು ಸೇರಲಾರಂಭಿಸಿತು. ಎಲ್ಲಿ ನೋಡಿದರೂ ಜನ-ಜನ-ಜನಗಳ ಜಾತ್ರೆಯೇ. ಅದೊಂದು ಅಕ್ಷರ ಬ್ರಹ್ಮನ ರಥೋತ್ಸವದಂತೆ, ಶಾರದಾಸುತನ ಸಂದರ್ಶನಾಕಾಂಕ್ಷಿಗಳ ನೂಕುನುಗ್ಗಲು, ಆದರೆ ಎಲ್ಲದರಲ್ಲೂ ಒಂದು ಬಗೆಯ ಶಿಸ್ತು-ಸಂಯಮಗಳ ಪಾಲನೆ ಎದ್ದು ಕಾಣುತ್ತಿತ್ತು. ಗಲಿಬಿಲಿಯಾದರೆ, ಶಿಸ್ತು ಮುರಿದರೆ, ಸಂಯಮ ಮೀರಿದರೆ ಎಲ್ಲಿ ಅಜ್ಜನವರು ಸಿಟ್ಟಾಗಿಬಿಡುವರೋ ಎಂಬ ನೈತಿಕ ಪ್ರಜ್ಞೆ, ನೆರೆದವರೆಲ್ಲರಲ್ಲೂ ಮೂಡಿದ್ದು, ನಮ್ಮ ಕರ್ನಾಟಕ ಸಂಸ್ಕೃತಿಗೇ ಕೀರ್ತಿಕಲಶವಿಟ್ಟಂತಾಗಿತ್ತು.

ಸಂಜೆ 4.30ಕ್ಕೆ ಹೊರಟ ಅಜ್ಜನವರ ಮೆರವಣಿಗೆ, ಮೊದಲೇ ನಿಗದಿತವಾಗಿದ್ದಂತೆ ಊರಿನ ಪ್ರಮುಖ ರಸ್ತೆಗಳಲ್ಲೆಲ್ಲಾ, ವಾದ್ಯಗಳ ಘೋಷದೊಂದಿಗೆ, ಪೂರ್ಣಕುಂಭದ ಸಹಿತ, ಪೌರೋಹಿತರ ವೇದಪಠಣದ ಸಹಿತ, ನಿಧಾನಗತಿಯಲ್ಲಿ ನಡೆದಿತ್ತು. ಮನೆ-ಅಂಗಡಿಗಳ ಮುಂದೆಲ್ಲಾ ಕಂಗೊಳಿಸುತ್ತಿದ್ದ ರಂಗು ರಂಗಿನ ರಂಗವಲ್ಲಿ, ಚಲ್ಲಿದ್ದ ಹೂ ಕುಸುಮಗಳು, ರಥದ ಮೇಲಿದ್ದ ರಸಬ್ರಹ್ಮನ ಕಣ್ಣುಗಳಲ್ಲಿ, ಬದುಕಿನ ಸಾಧನೆಗಳ ಸಂತೃಪ್ತಿಯ ದ್ಯೋತಕವಾಗಿ ಹನಿಗೂಡಿ, ಹೊರಬಿದ್ದರೆ ಎಲ್ಲಿ ಅಪಾರ್ಥಕ್ಕೆ ಎಡೆ ಮಾಡೀತೋ ಎಂಬಂತೆ ಅಲ್ಲೇ ನಿಂತು, ತಾನೂ ಆ ದೃಶ್ಯವನ್ನು ನೋಡುತ್ತಿರುವಂತಿತ್ತು. ಜೊತೆ ಜೊತೆಯಲ್ಲೇ ನಡೆದು ಬರುತ್ತಿದ್ದ ನಾನಂತೂ, ಇನ್ನೆಂದೂ ಜೀವಿತದಲ್ಲಿ ಲಭ್ಯವಾಗದ, ಆ ಸ್ವರ್ಗಸದೃಶ್ಯ ದೃಶ್ಯವನ್ನು ಎಳೆದೆಳೆದು ಕಣ್ಣುಗಳಲ್ಲಿ ತುಂಬಿಕೊಂಡು, ಚಿತ್ತದಲ್ಲಿ ಮೂಡಿಸಿಕೊಂಡು, ಮನದಲ್ಲಿ ಕಾಪಾಡಿ ಕೊಳ್ಳುತ್ತಿದ್ದೆ. ನನ್ನಂಥವರು ಅಲ್ಲಿ ಸಹಸ್ರ ಸಹಸ್ರ ಭಕ್ತರಿದ್ದರೂ ಸಹ, ಅದೇನೋ ನಾನೇ ಮೊದಲಿಗ, ನಾನೇ ಅತಿ ಭಾಗ್ಯಶಾಲಿ, ನಾನೇ ಅಜ್ಜನವರಿಗೆ ಅತಿ ಪ್ರೀತಿಪಾತ್ರ ಎಂಬ ಸಾರ್ಥಕ ಸ್ವಾರ್ಥಭಾವನೆ ಮೂಡಿತ್ತು. "ನೀವೇ ಎಲ್ಲಾ-ನಾನೇನೂ ಅಲ್ಲ"ಎಂಬ ಮಾಮೂಲೀ ಸಣ್ಣತನದ ಕೋರಿಕೆಗೆ ಬದಲಾಗಿ, ನನ್ನಲ್ಲಿ ಮೂಡುತ್ತಿದ್ದುದು "ನಡೆಯುವ ಶಕ್ತಿ, ನುಡಿಯುವ ಯುಕ್ತಿ, ನಿಮ್ಮಡಿಯಲ್ಲೇ ಮಡಿಯುವ ಭಾಗ್ಯ ಕೊಡಿ" ಎಂಬುದೊಂದೇ ಮಂತ್ರ. ಅದನ್ನೂ ಸಹ ಅವರೇ ಹೇಳಿಕೊಟ್ಟದ್ದು.

ಮುಂದಿನ ಪುಟ ನೋಡಿ ...

ಸಮಯಕ್ಕೆ ಸರಿಯಾಗಿ ಮಂಟಪಕ್ಕೆ ಆಗಮಿಸಿದ ರಥದಿಂದ, ವರಕವಿ, ಜ್ಞಾನಪೀಠ ಪ್ರಶಸ್ತಿ ಸಾರ್ಥಕ ವಿಜೇತ, ಅಖಂಡ ಅಕ್ಷರಾರಾಧಕರ ಅಂತರ್ಯಾಮಿ, ಅಂಬಿಕಾತನಯದತ್ತ, ಡಾ|ದ.ರಾ. ಬೇಂದ್ರೆಯವರನ್ನು ಕರೆದೊಯ್ದು, ಸನ್ಮಾನ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದಾಗ, ಮುಗಿಲೆತ್ತರಕ್ಕೆ ಮುಟ್ಟಿತು..ಉಘೇ.ಉಘೆ.ಉಘೇ.. ಎಂಬ ಹರ್ಷೋದ್ಗಾರ. ಏನೊಂದೂ ಆಡಂಬರವಿಲ್ಲದ ಅಜ್ಜನವರ ಮಾಮೂಲಿ ಉಡುಗೆ-ಅದೇ ಕಚ್ಚೆಪಂಚೆ, ಕಾಲರ್‍ರಹಿತ, ಕರೀ ಕೋಟು, ತಲೆಯ ಮೇಲೆ ಕರಿ ಟೋಪಿ. ಶಾರದೆಗೆ ಉಡುಗೆಯೇಕೆ, ತೊಡುಗೆಯೇಕೆ, ಭಾವುಕತೆಗೆ ಮನದ ಶ್ರೀಮಂತಿಕೆಯುಳಿದು, ಅನ್ಯ ಆಡಂಬರಗಳೇಕೆ, ಎಂದು ನೋಡುಗರನ್ನು ಕೇಳುವಂತಿತ್ತು ಅಜ್ಜನವರ ಶೃಂಗಾರ. ನೆರೆದಿದ್ದವರೆಲ್ಲರ ನೆಟ್ಟನೋಟ ಮುಂದಿನ ಮಹಾದೃಶ್ಯಕ್ಕಾಗಿ ಕಾದುನಿಂತಿತ್ತು.

ಬೆಳ್ಳಿಯ ಹರಿವಾಣದಲ್ಲಿ ಅಜ್ಜನವರ ಪಾದ ತೊಳೆದು, ಗಂಧಪುಷ್ಪಗಳಿಂದ ಅರ್ಚಿಸಿ, ಮಂಗಳದ್ರವ್ಯಗಳನ್ನು ಲೇಪಿಸಿ, ತಲೆಯಮೇಲಿಂದ ಹೂಕುಸುಮಗಳು ಮೃದುವಾಗಿ ಸುರಿಯುತಿರೆ, ಬಂಗಾರದ ಕುಸುರಿಯ ಕೆಲಸದಿಂದ ಶೋಭಿತವಾದ ಕಾಶ್ಮೀರಿ ಶಾಲನ್ನು ಹೊದಿಸಿ, ಅವರ ಅಪ್ಪಣೆ ಪಡೆದು ತಲೆಯ ಮೇಲೆ ಟೋಪಿಗೆ ಬದಲಾಗಿ, ಮೈಸೂರಿನ ಜರತಾರೀ ಪೇಟವನ್ನಿಟ್ಟು, ಶ್ರೀಗಂಧದ ಮಾಲೆಯಿಂದ ಕೊರಳನ್ನು ತುಂಬಿ, ಸ್ವರ್ಣ ಲೇಪಿತ ರಜತ ಶಾರದಾಮಾತೆಯ ಮೂರ್ತಿಯನ್ನು, ಫಲಪುಷ್ಪಗಳ ಸಹಿತ, ಅಜ್ಜನವರ ಮಡಿಲಲ್ಲಿಟ್ಟಾಗ, ನೆರೆದಿದ್ದ ಇಡೀ ಭಕ್ತಸಮೂಹ ಎದ್ದು ನಿಂತು ಕೈ ಮುಗಿದ ದೃಶ್ಯ ಅವರ್ಣನೀಯಾ-ಪ್ರಾಥಸ್ಮರಣೀಯ. ನಂತರ ಅತ್ಯಂತ ಎಚ್ಚರಿಕೆಯಿಂದ, ಸರಳವಾದ, ಸುಂದರ ಶೈಲಿಯಲ್ಲಿ, ಹೊಗಳಿಕೆಯನ್ನು ಎಳ್ಳಷ್ಟೂ ಸಹಿಸದ ಅಜ್ಜನವರ ಆಸೆಗನುಗುಣವಾಗಿ, ಅಕ್ಷರಕ್ಷರಗಳನ್ನೂ ತೂಗಿ ನೋಡಿ, ಗಂಡುಮೆಟ್ಟಿನ ಉತ್ತರ ಕರ್ನಾಟಕದ ಕನ್ನಡ ನುಡಿಯಲ್ಲಿ ತಯಾರಾದ ಸನ್ಮಾನ ಪತ್ರವನ್ನು ಕೇಶವಮೂರ್ತಿಯೇ ಓದಿ, ಬೆಳ್ಳಿಯ ಚೌಕಟ್ಟಿನಲ್ಲಿಟ್ಟು ಕೊಟ್ಟು, ಕಾಲಿಗೆರೆಗಿದಾಗ, ನಿಂತಿದ್ದವರು ನಿಂತಲ್ಲಿಂದಲೇ ಬಗ್ಗಿ ನಮಸ್ಕರಿಸಿ ಧನ್ಯತೆಯನ್ನು ಪಡೆದರು. ಮುಂದಿನ ಕಾರ್ಯಕ್ರಮ ಸನ್ಮಾನಕ್ಕೆ ಅಜ್ಜನವರಿಂದ ಉತ್ತರ... ಎಂದು ಹೇಳುತ್ತಿದ್ದಂತೇ ಇಡೀ ಸಭೆಯಲ್ಲಿ ವಿದ್ಯುತ್ ಸಂಚಾರವಾಯ್ತು. ನೆರೆದಿದ್ದವರೆಲ್ಲಾ ಮೈಯೆಲ್ಲಾ ಕಣ್ಣಾಗಿ, ಮನವೆಲ್ಲಾ ಕಿವಿಯಾಗಿ, ರಸಿಕಾಗ್ರಣಿಯ ಮಾತುಗಳನ್ನು ಕೇಳಲು ನಿಮಿರಿ ನಿಂತರು. ಕೆಲವೇ ಕ್ಷಣಗಳ ಮುನ್ನ ಜಯಕಾರ, ಗುಜು ಗುಜುಗಳಿಂದ ತುಂಬಿದ್ದ ಸಭೆ, ಕ್ಷಣಾರ್ಧದಲ್ಲಿ ನಿಶ್ಯಬ್ದವಾಯ್ತು. ಆಡುವ ಉಸಿರು ಜೋರಾದರೆ ಎಲ್ಲಿ ಅಜ್ಜನವರ ಮಾತೆರಡು ಕೇಳದೇ ಹೋದೀತೋ, ಅತ್ತಿತ್ತ ಸರಿದರೆ ಕೇಳಿದ ಮಾತುಗಳ ಅರ್ಥ ಏರುಪೇರಾದಿತೋ ಎಂದು ಕಾದು ಕೂತಿತು ಸಭೆ.

ಬ್ರಹ್ಮನರಾಣಿಯ ಔರಸಪುತ್ರ ಎದ್ದು ನಿಂತ ಭಂಗಿ, " ಮೂಡಲ ಮನೆಯ ಮುತ್ತಿನ ನೀರಿಂದೆರಕಾವ ಹೊಯ್ದು" ತೆಗೆದ ಶಾರದೆಯ ಪ್ರತಿಮೂರ್ತಿಯಂತಿತ್ತು. " ಇಳಿದು ಬಾ ತಾಯೇ ಇಳಿದು ಬಾ..ಇಳಿದು ಬಾ ಶಾರದೆಯೇ ಇಳಿದು ಬಾ.." ಎಂದು ಅಂತರಂಗದಲ್ಲೇ ಕೂಗುತ್ತಿದ್ದವರ ಧ್ವನಿಗೆ ಪ್ರತಿಧ್ವನಿಯಾಗಿ, ನಾದ ಬಿಂದು ರೂಪಿಯಾದ ಅಂಬಿಕಾತನಯದತ್ತರ ಕಂಠದ " ನಾಲ್ಕು ತಂತಿಗಳಿಂದ" ಹೊರಹೊಮ್ಮಿತು ರಸಗಂಗೆ ಅಕ್ಷರಾವತಾರದಲ್ಲಿ. ಅಂದಿನ ಅಜ್ಜನವರ ಭಾಷಣ ಹಿಂದೆಂದೂ ಕೇಳಿರದ, ಮುಂದೆಂದೂ ಕೇಳಲಸದಳವಾದಂಥಾ ಮನದ ಮೋಡಿಯ ಮಾತುಗಳದ್ದಾಗಿತ್ತು. ಅದೊಂದು, ಅಹಂಕಾರದ ಶಿರಚ್ಛೇದನದಂತೆ, ಅಜ್ಞಾನಕ್ಕೆ ಮಾಡಿಸಿದ ವಿಷಪ್ರಾಶನದಂತೆ, ಕಂಡು ಕರುಬುವವರ ಕೊರಳಿಗೆ ಹಾಕಿದ ನೇಣಿನಂತೆ, ಬೇಡಿ ಬಯಸುವ ಭಕ್ತರ ಭಾಗಕ್ಕೆ ವಿಷಯಾಮೃತದ ಸವಿಯೂಟದಂತೆ, ಕಾದುಕೂತ ಪ್ರೇಮಿಯ ಬಳಿಗೆ ಪ್ರೇಯಸಿಯು ಬಂದೆರಗಿದಂತೆ, ಭಾಸವಾಗಿ ನೆರೆದಿದ್ದ ಭಕ್ತ ಸಮೂಹ ತೃಪಿಯಿಂದ ಎದ್ದು ನಿಂತು ಕರತಾಡನ ಮಾಡಿ ತಮ್ಮ ಮೆಚ್ಚುಗೆಯನ್ನು ಹೊರಚೆಲ್ಲಿತು. ಅಜ್ಜ ಅನೇಕ ಬಾರಿ ನನ್ನೊಂದಿಗೆ ಹೇಳಿತ್ತಿದ್ದ ಮಾತು, "ತಮ್ಮಾ ಮಾತಾಡೋನ ಮಸಲತ್ತು, ಕಿಮ್ಮತ್ತು, ಗಮ್ಮತ್ತೂ ಇರೋದೂ-ಬರೋದೂ ಎಲ್ಲಿಂದಾಂತ ತಿಳಿದೀ..ಕುಂತು ಕೇಳ್ತಾರಲ್ಲಾ, ಅವರ ಮನಸ್ಸಿನ ರಸಿಕತೆಯ ಕಿಸೆಯಿಂದ್ಲೇ ಅಂಬೋದನ್ನ ಮರೀಬೇಡೊ ಯಪ್ಪಾ..ಭೂಮಿ ಮ್ಯಾಗಿನ ನೀರೇ ಮ್ಯಾಗೆ ಹೋಗಿ, ಮತ್ತೆ ಮಳೆಸುರಿಧಾಂಗೆ ಅಂತ ತಿಳಿ. ನೀರು ಭೂಮಿಮ್ಯಾಗೇ ಇಲ್ಲಾಂದ್ರೆ, ಮತ್ತಿನ್ನೆಲ್ಲಿಂದಾ ತರ್ತೀಯೋ ಯಪಾ.."? ಎಷ್ಟು ಸರಿ ಆ ಮಾತು. ಅಂದು ನೆರೆದಿದ್ದ ಜನಸ್ತೋಮವೇ, ಅವರ ಹೃದಯಾಂತರಾಳದಲ್ಲಿನ ನಿರೀಕ್ಷೆಯೇ, ಅಜ್ಜನ ಬಾಯಿಂದ ಅಕ್ಷರಕ್ಷರವಾಗಿ ಹೊರಚಿಮ್ಮಿದ್ದು.

ಅಜ್ಜನವರ ಅಮೃತವಾಣಿಯ ನಂತರ ಮತ್ತೇನೂ ನಡೆಯದು ಎಂದು ಅರಿತಿದ್ದ ಸಭಾ ನಿರ್ವಾಹಕರು, ಎರಡೇ ಮಾತಿನಲ್ಲಿ ನಾಳಿನ ಕಾರ್ಯಕ್ರಮದ ವಿವರಣೆ ಇತ್ತು, ಒಂದೇ ಮಾತಿನಲ್ಲಿ ವಂದನಾರ್ಪಣೆ ಮಾಡಿ ಮುಗಿಸಿದ್ದು ಬಹಳ ಲೇಸಾಯ್ತು. ಕೆಳಗಿಳಿದು ಬಂದ ಅಜ್ಜ, ನನ್ನ ಹೆಗಲಮೇಲೆ ಕೈ ಹಚ್ಚಿ, " ಏನಪಾ ಮಾಸ್ತರಾ..ಬಹಳ ಅಪರೂಪಾಗಿ ಬಿಟ್ಟೇಯಲ್ಲೋ..ಬಾ ಬಾ, ಮನೀಗೆ ಹೋಗಿಂದೆ ಚಾ ಕುಡ್ದು ಹೊಕ್ಕೀಯಂತೆ "ಎಂದು ಕರೆದೊಯ್ದರು. ನಾನು ತಪ್ಪಿಸಿಕ್ಕೊಳ್ಳುವಂತೆಯೇ ಇರಲಿಲ್ಲ. ಕಾರಣ ನನ್ನ ಮತ್ತು ಅಜ್ಜನವರದ್ದು ಕೇವಲ ಪರಿಚಯದ ಘಟ್ಟಕ್ಕೇ ಬಂದು ನಿಂತ ಬಾಂಧವ್ಯವಲ್ಲ. ಅದಕ್ಕೂ ನೂರು ಪಟ್ಟು ಮೀರಿ ಬೆಳೆದ, ಜನ್ಮ ಜನ್ಮಾಂತರಗಳ ಅನುಬಂಧವಾಗಿತ್ತು-ಹಾಗಂತ ಅಜ್ಜನವರೇ ಹತ್ತಾರು ಸಾರಿ ಹೇಳಿದ್ದರು. ಅದು ನಿಜವೇ ಎಂದು ನಂಬಿರುವುದರಲ್ಲಿ, ನನಗೆ ಸ್ವರ್ಗವನ್ನೇ ಧಿಕ್ಕರಿಸುವಷ್ಟು ಆತ್ಮ ಶಕ್ತಿ ಬರುತ್ತಿತ್ತು. ಜೊತೆಗೆ ನಾಳೆಯ ನನ್ನ ಸನ್ಮಾನದ ಅಗ್ನಿಪರೀಕ್ಷೆ ಬೇರೆ. ಬರೀ ಸನ್ಮಾನವಾಗಿದ್ದಿದ್ದರೆ ನಾನು ಚಿಂತಿಸಬೇಕಿರಲಿಲ್ಲ. ಅದಕ್ಕೆ ಉತ್ತರಿಸಲೂ ಬೇಕಿತ್ತು. ಇಂದಿನ ಉತ್ತರದಲ್ಲಿ ಅಜ್ಜ ಚಿರಸ್ಥಾಯಿಯಾಗಿ ಜನಮನದಲ್ಲಿ ಉಳಿದು ಬಿಟ್ಟಿದ್ದಾರೆ. ಉತ್ತರಿಸಲು ಯಾರ್ಯಾರಿಗೂ ಏನೇನೂ ಬಿಟ್ಟಿಲ್ಲ. ಅಂದಮೇಲೆ ನಾಳಿನ ನನ್ನ ಪಾಡೇನು? ಅದೇ ಜನ-ಅದೇ ಸಭೆ. ಅದೇ ಸನ್ಮಾನ. ಜನಗಳಿಗೆ ನನ್ನುತ್ತರದ ಬಗ್ಗೆ ಅತೀವ ನಿರೀಕ್ಷೆ ಬೇರೇ. ಅಜ್ಜನವರೇನಾದರೂ ಬಂದು, ಮುಂದುಗಡೆ ಕೂತರೆಂದರೆ, ಮಾಡುವುದು ಸನ್ಮಾನವಾಗಿ-ನಾ ಮಾಡಿಕೊಳ್ಳುವುದು ಶುದ್ಧ ಅವಮಾನವಾದೀತು ಎಂಬ ಭಯ. ಅದಕ್ಕೇ ಹೇಗಾದರೂ ಮಾಡಿ ನಾಳೆಯ ಸಭೆಗೆ ಅಜ್ಜನವರನ್ನು ಬಾರದಂತೆ ತಡೆಯಬಲ್ಲೆನಾದರೇ..,..ಹೌದು ಅದಾದರೆ ನಾನು ಗೆದ್ದಂತೆ. ಆದರೆ ಅದನ್ನು ಸಾಧಿಸುವ ಬಗೆ? ಅವರ ಮನಸ್ಸಿನಲ್ಲಿ ನಾಳೆ ಬರಲೇ ಬೇಕೆಂದಿದ್ದರೆ, ತಡೆಯಲು ಸಾಧ್ಯವೇ? ಉಕ್ಕಿ ಬರುವ ಪ್ರವಾಹಕ್ಕೆ ಅಂಗೈ ಒಡ್ಡಿದಂತೆ, ಕಾಡ್ಗಿಚ್ಚನ್ನು ಉದ್ಧರಣೆಯ ನೀರಲ್ಲಿ ಆರಿಸಲು ಯತ್ನಿಸಿದಂತೆ. ಮೊದಲು ಅವರ ಮನಸ್ಸಿನಲ್ಲಿ ಏನಿದೆಯೆಂದು ತಿಳಿದರೆ, ಮುಂದಿನ ದಾರಿ ಹುಡುಕಬಹುದು ಎಂದು ನಿರ್ಧರಿಸಿ ಕೇಳಿದೆ- ಅಜ್ಜ ನಾಳೆಯ ತಮ್ಮ ಕಾರ್ಯಕ್ರಮವೇನು? ಎಂದು. ಥಟ್ಟನೆ ಉತ್ತರಿಸಿದರು, " ಕೇಳ್ತೀಯಲ್ಲೋ ತಮ್ಮಾ,.. ನಾಳೆ ಮುಂದೆ ಕುಂತು ನಿನ್ನ ಮಾತು ಕೇಳೋದೂ.,ಹ್ಯಾಂಗೂ ನಿನ್ನ ಮಾತು ಕೇಳಿ ಭಾಳ ದಿನ ಆಗೈತಿ ನೋಡಪಾ..ಕೂಡೇ ನನ್ನ ಮೊಮ್ಮಗ್ಗೆ ಮಾಡೋ ಸನ್ಮಾನ ನೋಡೋ ಇಂಥಾ ಅವಕಾಶಾನಾದ್ರೂ ಬಿಡ್ಲಿಕ್ಕೆ ಬರ್ತಾತೇನೂ.,."

ಸತ್ತೆ ಎಂದು ಕೊಂಡು, ಇನ್ನವರನ್ನು ಹೇಗೂ ತಪ್ಪಿಸಲು ಸಾಧ್ಯವಿಲ್ಲವೆಂದರಿತು, ನಮಸ್ಕರಿಸಿ, " ಛಲೋ ಹರಸಿ ಅಜ್ಜಾ ನನ್ನ. ಯಾಕಂದ್ರೆ ಅಜ್ಜಂಗೆ ಮೊಮ್ಮಗ ಕೆಮ್ಮೋದನ್ನ ಕಲಿಸ್ಲಕ್ಕಲ್ಲಾ...ತೋರಸ್ಲಿಕ್ಕೆ ಹೊಂಟಾನೆ, ಅಂದಮ್ಯಾಗೆ ಅಜ್ಜನ ಆಶೀರ್ವಾದ ಘಟ್ಟಿ ಇರಬೇಕಲ್ಲಾ"ಅಂದೆ. ಅದಕ್ಕೆ ಅಜ್ಜನವರು " ಏ ಹೋಗೋ ಹುಚ್ಚಪ್ಪಾ,.ಯಾರು ಯಾರಿಗೆ ಕಲಿಸೋದೋ,.ಮನುಷ್ಯ ಹುಟ್ಟೋ ಮುಂದೆ, ಸಾಯೋ ಮುಂದೆ, ಕೆಮ್ಕೋತಾನೇ ಇರ್ತಾನೆ ಅಂದ ಮ್ಯಾಗೆ, ಇನ್ನು ಕಲಿಸೋ ಮಾತಾದರೂ ಎಲ್ಲಿಬಂತಪ್ಪ? ನಡಿ ನಡಿ.," ...

ಮುಂದಿನ ಸಂಚಿಕೆಯಲ್ಲಿ ಮುಕ್ತಾಯ ...

# ಉತ್ತಮ ಆಹಾರ ಸೇವನೆ ಮತ್ತು ಕ್ಯಾನ್ಸರ್ ನಿಂದ ರಕ್ಷಣೆ

ರಾಜಿ ಜಯದೇವ್ (Accredited Practising Dietician)
**Mrs Raji Jayadev**, B.Sc (Hons) Dip Nutr & Diet (Syd)

ಉತ್ತಮ ಆಹಾರ ಸೇವನೆಯಿಂದ ಕ್ಯಾನ್ಸರ್ ಅನ್ನು ತಡೆಗಟ್ಟಲು ಸಾಧ್ಯವೇ? ಸಾಧ್ಯವಿದೆ.

ಆಸ್ಟ್ರೇಲಿಯಾದಲ್ಲಿ ಉಂಟಾಗುವ ಎಲ್ಲ ತರದ ಕ್ಯಾನ್ಸರ್ ಗಳಲ್ಲಿ ಶೇಕಡಾ ೩೦ರಿಂದ ೪೦ ರಷ್ಟು ಕ್ಯಾನ್ಸರ್ ಗಳಿಗೂ, ನಾವು ಸೇವಿಸುವ ಆಹಾರಕ್ಕೂ ನೇರ ಸಂಬಂಧವಿದೆ ಎಂಬುವುದಕ್ಕೆ ಬಹಳಷ್ಟು ಪುರಾವೆಗಳಿವೆ. ಕ್ಯಾನ್ಸರ್ ಬರುವುದಕ್ಕೆ ಹಲವಾರು ಕಾರಣಗಳಿವೆ. ಉದಾಹರಣೆಗೆ ಸ್ತನದ ಕ್ಯಾನ್ಸರ್ ನ (Breast Cancer) ಕಾರಣಗಳು:

೧, ವಂಶಾವಳಿ (Hereditary) ಅಥವಾ ವಂಶವಾಹಿಗಳು (Genes)
೨. ಪ್ರಚೋದಕ ಗ್ರಂಥಿಗಳು (Hormones)
೩.ಸ್ಥೂಲಕಾಯ (Obesity)
೪. ಅನಾರೋಗ್ಯಕರ ಜೀವನ ಶೈಲಿ

**ಆರೋಗ್ಯಕರ ಜೀವನ ಶೈಲಿ ಎಂದರೆ**




೧. ಧೂಮಪಾನ ನಿಷೇಧ
೨. ಮದ್ಯಪಾನ ನಿಷೇಧ ಅಥವಾ ಹಿಡಿತ
೩. ಪೌಷ್ಟಿಕ ಆಹಾರ ಸೇವನೆ
೪. ನಿಯಮಿತ ವ್ಯಾಯಾಮ
೫. ಆರೋಗ್ಯಕರ ದೇಹದ ತೂಕ ಅಥವಾ ಬೊಜ್ಜುರಹಿತ ದೇಹ

ನಿಮ್ಮದು ಅಸಮರ್ಪಕ ಜೀವನಶೈಲಿಯಾಗಿದ್ದಲ್ಲಿ, ಕ್ಯಾನ್ಸರಿನ ಅಪಾಯವನ್ನು ತಡೆಗಟ್ಟಲು ನೀವು ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಕ್ಯಾನ್ಸರ್ ತಡೆಗಟ್ಟಲು ನೀವು ಪೌಷ್ಟಿಕ ಆಹಾರ ಸೇವನೆ ಮಾಡುತ್ತಿದ್ದೀರಾ? ಮೊದಲಿಗೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ನೀವು ಪ್ರತಿದಿನ ಎರಡು ಬೊಗಸೆ (400gm) ತರಕಾರಿಗಳನ್ನು ತಿನ್ನುತ್ತೀರಾ?
೨. ನೀವು ಪ್ರತಿದಿನ (300gm) ಹಣ್ಣುಗಳನ್ನು ತಿನ್ನುತ್ತೀರಾ?
೩. ನೀವು 'wholegrain' ಬ್ರೆಡ್ ಮತ್ತು 'cereals' ಗಳನ್ನು ಬಳಸುತ್ತೀರಾ?
೪. ನೀವು ಬಾಸ್ಮತಿ ಅಥವಾ ಕಂದು ಬಣ್ಣದ ಅಕ್ಕಿಯನ್ನು ಉಪಯೋಗಿಸುತ್ತೀರಾ?
೫. ನೀವು ಸಸ್ಯಾಹಾರಿಗಳಾಗಿದ್ದಲ್ಲಿ ಪ್ರತಿದಿನ ಒಂದು ಅಥವಾ ಎರಡು ಲೋಟ (250ml) ಬೇಯಿಸಿದ ಬೇಳೆ ಅಥವಾ ಕಾಳುಗಳನ್ನು ಸೇವಿಸುತ್ತೀರಾ?
೬. ನೀವು ವಾರದಲ್ಲಿ 3-4 ದಿನ, 20-30gm ಕೊಬ್ಬಿನ ಬೀಜಗಳನ್ನು (ಉದಾ: ಕಡಲೇಕಾಯಿ , ಸೀಕುಂಬಳಬೀಜ) ಸೇವಿಸುತ್ತೀರಾ?
೭. ನೀವು ಮಾಂಸಾಹಾರಿಗಳಾಗಿದ್ದಲ್ಲಿ, ಮಾಂಸಾಹಾರವನ್ನು ವಾರದಲ್ಲಿ 3-4 ದಿನ ತ್ಯಜಿಸುತ್ತೀರಾ?
೮. ಮದ್ಯಪಾನ ನಿಮ್ಮ ಹಿಡಿತದಲ್ಲಿದೆಯೇ? ವಾರಾಂತ್ಯದಲ್ಲಿ ಒಂದೆರಡು 'drinks' ಮಾತ್ರ ತೆಗೆದುಕೊಳ್ಳುತ್ತೀರಾ?
೯. ವಾರಕ್ಕೆ 3-4 ಗಂಟೆಗಳ ಕಾಲ ವ್ಯಾಯಾಮ ಮಾಡುತ್ತೀರಾ?
೧೦. ನಿಮ್ಮ ದೇಹ ಬೊಜ್ಜುರಹಿತವಾಗಿದೆಯೇ?
೧೧. ನಿಮ್ಮ ಆಹಾರದಲ್ಲಿ ಸಂತೃಪ್ತ ಕೊಬ್ಬು (saturated fat) ಅತ್ಯಂತ ಕಡಿಮೆ ಮಟ್ಟದಲ್ಲಿದೆಯೇ?
ಸಂತೃಪ್ತ ಕೊಬ್ಬಿನ ಪದಾರ್ಥಗಳು: ಹಾಲು, ಮೊಸರು, ಗಿಣ್ಣು (cheese, panner), ಅಂಗಡಿಯಲ್ಲಿ ದೊರಕುವ ಸಿಹಿ ಮತ್ತು ಕರಿದ ತಿಂಡಿ ತಿನಿಸುಗಳು, ಬಿಸ್ಕಿಟ್ಸ್ , ಚಾಕೊಲೇಟ್ ಇತ್ಯಾದಿ.

ಮೇಲ್ಕಂಡ ಪ್ರಶ್ನೆಗಳಲ್ಲಿ ಯಾವುದಕ್ಕಾದರು 'ಇಲ್ಲ' ಎಂದು ಉತ್ತರಿಸಿದ್ದರೆ, ಕ್ಯಾನ್ಸರ್ ನಿಂದ ರಕ್ಷಣೆ ಪಡೆಯಲು ನಿಮ್ಮ ಜೀವನ ಶೈಲಿಯನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ.

ಹೆಚ್ಚಿನ ಮಾಹಿತಿಗೆ: www.cancer.org.au

**ಮುಂದಿನ ತಿಂಗಳು: ಕ್ಯಾನ್ಸರ್ ನಿಂದ ರಕ್ಷಿಸುವ ಆಹಾರ ಪದಾರ್ಥಗಳ ಬಗ್ಗೆ ತಿಳಿಯೋಣ.**

# ರಾಂ ರಾಮ

**ಇದು ಹಾಸ್ಯ ಪುಟ**



ರಾಮನಾಥ್

ಭಾಷಣಕಾರರು, ಹಾಸ್ಯ ಲೇಖಕರು

## ವಿಶೇಷ ಅಂಗಡಿಯಿದು, ವಿಚಿತ್ರ ಗೊಂಬೆಗಳಿವು.....

ಭಾರತ್ ಡಾಲ್ ಸೆಂಟರ್ಗೆ ನಿಮಗೆ ಸ್ವಾಗತ. ದಸರಾಗೆ ಒಳ್ಳೊಳ್ಳೇ ಬೊಂಬೆಗಳು ಬಂದಿವೆ. ಒಳಗೆ ಬನ್ನಿ. ಒಂದೊಂದಾಗಿ ತೋರಿಸಿ ಎಕ್ಸ್‌ಪ್ಲೇಯಿನ್ ಮಾಡ್ತೀನಿ ಬನ್ನಿ...

ನೋಡಿ, ಅಲ್ಲಿ, ಮೇಲ್ಗಡೆ, ತಲೇಗೊಂದ್ ಪಟ್ಟೆ, ಮಂಡಿಗೊಂದ್ ಪಟ್ಟಿ ಹಾಕ್ಕೊಂಡು, ಕಣ್ಣಿಗೊಂದು ಕನ್ನಡಕ ಹಾಕ್ಕೊಂಡು, ಮೈ ಭರ್ತಿ ಕರ್ರ್ರ್ರ್ರಗೆ ಹೊಳೆಯುತ್ತಿದೆಯಲ್ಲಾ, ಅದೇ ಈಗಿನ ಪಟ್ಟದ ಗೊಂಬೆ. ಮುಂಚೆ ಅದು ಬೆಳ್ಳಗೇ ಇತ್ತು. ಕಲ್ಲಿದ್ದಲ ಮಸಿ ಹತ್ತೀ ಹತ್ತೀ ಕಪ್ಪಾಗ್ಹೋಯ್ತು! ಹಿಂದೆ, ಅದರ ಕೈಲಿ ಅಕೌಂಟ್ಸ್ ಪುಸ್ತಕ ಇದ್ದಾಗ, ಬಹಳ ಕಳೆಕಳೆಯಾಗಿತ್ತು, ಪಟ್ಟಕ್ಕೆ ಬಂದ್ಮೇಲೆ, ಪಾಪ, ಮೊದ್ದು ಕಳೆ ಬಂದ್ಬಿಟ್ಟಿದೆ.

ಅದಕ್ಕೆ ಕೀ ಕೊಟ್ರೆ ಸಾಕು "ಸೋನಿಯಾಜೀ, ರಾಹುಲ್‌ಜೀ, ಸೋನಿಯಾಜೀ, ರಾಹುಲ್‌ಜೀ" ಅಂತ ಜೀಜೀ ಪದ ಸೊಗಸಾಗಿ ಹಾಡತ್ತೆ. ಇದನ್ನ ಮನ್ಮೋಹನ್ ಗೊಂಬೆ ಅಂತ ಕರೀತಾರೆ.

ಒಂದು ಮೆಟ್ಟಿಲು ಕೆಳಗೆ ನೋಡಿ, ಕ್ಲೀನಾಗ್ ಡ್ರೆಸ್ ಮಾಡ್ಕೊಂಡು, ಕಮಲದ ಹೂವನ್ನ ಕೈಲಿ ಹಿಡ್ಕೊಂಡು, ಟ್ರಿಮ್ಮಾಗ್ ಗಡ್ಡ ಬಿಟ್ಕೊಂಡಿರೋ ಗೊಂಬೆ ಕಾಣ್ತಾ ನಿಮ್ಗೆ, ಅದು ಮುಂದಿನ ವರ್ಷ ಪಟ್ಟದ ಗೊಂಬೆ ಆಗ್ಬಹುದು.

ಮುಂಚೆ ರಥದ್ಮೇಲ್ಕೂತ್ಕೊಂಡು ಝುಂ◌ಂ◌ಂಯ್ ಅಂತ ಮೆರೀತಿದ್ದ ಅಡ್ವಾಣಿ ಅನ್ನೋ ಗೊಂಬೆ ಇಲ್ಲಿ ಜೋಡಿಸಿರಬೇಕಾಗಿತ್ತು. ಆದ್ರೆ ಆ ಗೊಂಬೆ ಹಳೇದಾಗಿ ಸ್ವಲ್ಪ ಲಡ್ಡಾಗಿದೆ ಅಂತ ಕೆಲವರು ಅಭಿಪ್ರಾಯ ಪಟ್ಟಿದ್ರಿಂದ ಈ ಗೊಂಬೆ ಕೂರ್ಸಿದೀವಿ. ಗುಜರಾತಿನಲ್ಲಿ ಈ ಗೊಂಬೆ ತುಂಬಾ ಫೇಮಸ್ ಆಗಿದೆ. ಹೆಸರೇನು ಅಂದ್ರೆ? ಮೋದಿ ಗೊಂಬೆ!

ಕೊಂಚ ಕಿವಿಗೊಟ್ಟು ಕೇಳಿ; "ಈ ಗೊಂಬೆ ಏನಾದ್ರೂ ಪಟ್ಟಕ್ ಬಂದ್ರೆ ನಾನು ಪ್ರಾಣ ಬಿಟ್ಬಿಡ್ತೀನಿ" ಅಂತ ಕೂಗ್ತಿರೋದು ಕೇಳಿಸ್ತೇ? ಆ ಗೊಂಬೆ ಅಲ್ಲಿದೆ ನೋಡಿ. ಮೋದಿ ಗೊಂಬೆಗೆ ವಿರುದ್ಧವಾದ ದಿಕ್ಕಿನಲ್ಲಿ ಇದನ್ನಿಟ್ಟಿದ್ದೀವಿ. ಇದು ಮೊದಲು ಹೊಟೆಲ್‌ಗಳವರ ಮೆಚ್ಚಿನ ಟಾಕಿಂಗ್ ಡಾಲ್ ಆಗಿತ್ತು. ಆಮೇಲೆ ಅದ್ಯಾವುದೋ ಪೀಠದ ಮೇಲೆ ಕೂರಿಸಿದ್ಮೇಲೆ ಹೆಚ್ಚಿನ ಬೆಲೆ ಬಾಳೋಹಾಗಾಗಿತ್ತು. ಆದ್ರೆ ತಾನೇ ಸ್ವಂತ ಕೀ ಕೊಟ್ಕೊಂಡು, ಏನೇನೋ ಅಪದ್ಧ ಮಾತಾಡಕ್ಕೆ ಆರಂಭಿಸಿ ತನ್ನ ಬೆಲೆ ಸ್ವಲ್ಪ ಕಳ್ಕೊಂಡಿತ್ತು. ಇದೇ ಅನಂಥೂ ಡಾಲ್.

ಈ ಕಡೆ ಬನ್ನಿ, ಇಲ್ಲಿ ಇನ್ನೊಂದು ಟಾಕಿಂಗ್ ಡಾಲ್ ಇದೆ. ಇದು ಇಂಡಿಯಾನ ಯಾವ್ಯಾವ್ದಕ್ಕೋ ಹೋಲ್ಸತ್ತೆ. ಇಂಡಿಯಾ ಈಸ್ ಲೈಕ್ ಎ ಬಲ್ಬ್. ಇಟ್ ಕ್ಯಾನ್ ಬಿ ವೆರಿ ಬ್ರೈಟ್, ಬಟ್ ದೇರ್ ಈಸ್ ನೋ ಕರೆಂಟ್ ಅಂತ ಎಲ್ಲೋ ಹೇಳ್ತಂತೆ. ಆಗ್ಲೇ, ಟೆಸ್ಟ್ ಮಾಡಕ್ಕೇಂತ ಕೀ ಕೊಟ್ಟಾಗ, ಇಂಡಿಯಾ ಈಸ್ ಲೈಕ್ ಎ ಮ್ಯಾಥಮಾಟಿಕ್ಸ್ ಬುಕ್, ಫುಲ್ ಆಫ್ ಪ್ರಾಬ್ಲಮ್ಸ್ ಅಂತ್ಹೇಳ್ತು. ಇಟಲೀಲಿ ಮ್ಯಾನುಫ್ಯಾಕ್ಚರ್ ಆಗಿ ಇಂಡಿಯಾಗೆ ಇಂಪೋರ್ಟ್ ಆಗಿರೋ ಈ ಗೊಂಬೆ ಹೆಸರು ರಾಹುಲ್ ಡಾಲ್ ಅಂತ

ಇಲ್ಲಿ ನೋಡಿ "ಕುರುಬಾನಿ ಕುರುಬಾನಿ ಕುರುಬಾನೀ, ಕರ್ನಾಟ್ಕದ್ ಮತದಾರ್ರೆ ಕುರಿ ಕಾಣಿ' ಅಂತ ಯಾವ್ದೋ ಹಾಡ್ಗೆ ಯಾವ್ದೋ ಸಾಹಿತ್ಯ ಸೇರ್ಸಿ ಪ್ರಜಾಪ್ರಭುತ್ವದ್ ಜಾತಿ ಕೆಡ್ಸೋ ಜನರ ಮಧ್ಯೆ ಕ್ಲೀನಾಗಿ ಇರೋ ಬೊಂಬೆ ಇದು. "ಯಾವ್ದೇ ಅಕ್ಕಿ ತೊಗೊಳಿ, ಒಂದೇ ರೂಪಾಯ್' ಅಂತ ಹೇಳ್ಕೊಂಡು ಪೀಠ ಏರಿರೋ ಈ ಗೊಂಬೆ ಕೀ ಕೊಟ್ರೆ ಸಾಕು, ಸಿಡಾರ್ ಅಂತ ಸಿಡುಕತ್ತೆ. ಈ ಬಾರಿ ಬಂದಿರೋ ಒಳ್ಳೆ ಕ್ವಾಲಿಟಿ ಗೊಂಬೆಗಳಲ್ಲಿ ಇದೇ ಬೆಸ್ಟು. ಹೆಸರು ಸಿದ್ದು ಡಾಲ್.

ಇಲ್ಲೊಂದ್ಹೊಸ ಗೊಂಬೆ ಇದೆ ನೋಡಿ. ನೋಡಕ್ಕೆ ಏತ-ಪಾತ ಇದ್ಹಾಗಿರೋ ಇದನ್ನ ಆರ್ಥಿ ಡಾಲ್ ಅಂತ ಕರೀತಾರೆ. ಆ ಕಡೆ ಧಡಿಯ ಕೂತ್ಕೊಂಡು, ಈ ಕಡೆ ಇಬ್ರೋ, ಮೂವರೋ ಸಣಕಲು ಹುಡುಗರು ಕೂತ್ಕೊಂಡು ನೀವು ಚಿಕ್ಕವರಿದ್ದಾಗ ಸೀಸಾ ಅಪ್ ಅಂಡ್ ಡೌನ್ ಆಡ್ತಿರ್ಲಿಲ್ವೇ, ಅದೇ ಮಾಡೆಲ್ ಇದು. ಆ ಕಡೆ ಒಂದೇ ಒಂದು ಡಾಲರ್ ಇಟ್ರೆ ಈ ಕಡೆ ಅರವತ್ತೆಪ್ಪತ್ ರೂಪಾಯಿ ಇಡ್ಬೇಕು. ಇದಕ್ಕೆ ಚಿದಂಬರ ರಹಸ್ಯ ಡಾಲ್ ಅಂತಾನೂ ಕರೀತಾರೆ.

ಈ ಕಡೆ ನೋಡಿ. ಈ ಗೊಂಬೆಗೆ ತನಗೆ ತಾನೇ ಕೀ ಕೊಟ್ಕೊಂಡು "ನನ್ನ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ರಾಜಕೀಯ ನಿವೃತ್ತಿ ತೊಗೋತೀನಿ" ಅಂತ ಹೇಳಕ್ಕೆ ಶುರು ಮಾಡತ್ತೆ. ಮಧ್ಯದಲ್ಲೇ ತೂಕಡಿಸಿಬಿಡತ್ತೆ. ಎಚ್ಚರ ಆದ ತಕ್ಷಣ "ಒಬ್ಬ ಮಗ ಸಿಎಂ ಆಗ್ಬೇಕು, ಇನ್ನೊಬ್ಬ ಪಿಎಂ ಆಗ್ಬೇಕು" ಅನ್ನತ್ತೆ. ಮತ್ತೆ ತೂಕಡಿಸತ್ತೆ. ಮತ್ತೆ ಎದ್ದು ಸೊಸೆಯರ ಹೆಸರೆಲ್ಲಾ ಕರೆಯತ್ತೆ. ಒಂದ್ಕಾಲದಲ್ಲಿ ಒಂಭತ್ತು ತಿಂಗಳ ಕಾಲ ಇದೂ ಪಟ್ಟದ ಗೊಂಬೆ ಆಗಿತ್ತು. ಈ ಗೊಂಬೆ ಏನಂದ್ರೂ ತಲೆ ಕೆಡಿಸ್ಕೊಳ್ದೆ ಇರತ್ತೆ. ಆದ್ರೆ 'ನೈಸ್' ಅಂದ್ರೆ ಮಾತ್ರ ರಫ್ ಆಗತ್ತೆ. ಇದರ ಹೆಸರು ಗೌಡ್ರು ಗೊಂಬೆ.

ಈ ತ್ರೀ ಇನ್ ಒನ್ ಗೊಂಬೆ ಸೆಟ್ ನೋಡಿ. ಇದನ್ನ ದ್ವಿಕಳತ್ರಯೋಗಿ ಅಂತಲೂ ಕರೀತೀವಿ. ಕೈಲಿ ಟಿವಿ ಇಟ್ಕೊಂಡಿರೋದು ಅನಿತಾ ಗೊಂಬೆ. ಮೊದಲು ಇನ್ನೂ ಕಳೆಕಳೆಯಾಗಿತ್ತು. ಈಗ ಬೆಂಗಳೂರು ರೂರಲ್‌ನಲ್ಲಿ ನಿಲ್ಸಿದ್ದಾಗ ಸ್ವಲ್ಪ ಮುಕ್ಕಾಗಿದೆ. ಕೈಲಿ ಮಗು, ಬರ್ತ್ ಸರ್ಟಿಫಿಕೇಟ್ ಇಟ್ಕೊಂಡಿರೋದು ರಾಧಿಕಾ ಗೊಂಬೆ, ಮಧ್ಯದಲ್ಲಿ ಇರೋದು ಕುಮಾರಣ್ಣ ಗೊಂಬೆ. ಈ ಸೆಟ್ ತೊಗೊಂಡ್ರೆ ಗೌಡ್ರು ಗೊಂಬೆ ಫ್ರೀ!

ಈ ಸರತಿ ಮಂಡ್ಯದಿಂದಲೂ ಒಂದು ಗೊಂಬೆ ಬಂದಿದೆ. ಕುಣಿದು, ಕುಪ್ಪಳಿಸಿ, ಹಾಡು ಹೇಳ್ತಾ ಮೆರೆಯೋದನ್ನ ಚೆನ್ನಾಗಿ ಪ್ರದರ್ಶನ ಮಾಡ್ತಿದ್ದ ಈ ಗೊಂಬೆ ಈಗ ಮಂಡ್ಯದಲ್ಲಿ ಪಟ್ಟದ ಗೊಂಬೆಯೇ ಆಗ್ಬಿಟ್ಟಿದೆ. ಇದರ ಮ್ಯಾನುಫ್ಯಾಕ್ಚರರ್ ಯಾರು ಅಂತ ಕೆಲವು ಮಾಧ್ಯಮಗಳು ಅನಗತ್ಯವಾಗಿ ಚರ್ಚೆ ಮಾಡ್ತಿದ್ವು. ಬಹಳ ಸುಂದರವಾದ ಈ ಗೊಂಬೆ ಹೆಸರು ರಮ್ಯ ಗೊಂಬೆ ಅಂತ!

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ಮುಂದಿನ ಪುಟ ನೋಡಿ

# ಹಾಸ್ಯ ಲೇಖನ – ವಿಶೇಷ ಅಂಗಡಿಯಿದು, ವಿಚಿತ್ರ ಗೊಂಬೆಗಳಿವು ... – ಮುಂದುವರಿದ ಭಾಗ

ಆ ಕಡೆ ಇದೆಯಲ್ಲಾ ಬಿಳೀ ಕಲರ್ ಗೊಂಬೆ... ಎಲ್ಲಿ ಅಂದ್ರೆ? ಅಲ್ಲಿ, ಅಷ್ಟು ದೊಡ್ಡದಾಗಿ ಕಾಣ್ತಿದೆಯಲ್ಲಾ ಸಾರ್.. ಅದೇ.. ಏನು? ಅದನ್ನ ಸುಣ್ಣ ಹೊಡೆದಿರೋ ಡ್ರಂ ಅನ್ಕೊಂಡ್ರಾ? ಅಲ್ಲ ಸಾರ್. ಒಂದ್ಕಾಲದಲ್ಲಿ ಜನರನ್ನ ಹುಚ್ಚೆಬ್ಬಿಸಿದ ಹೆಣ್ಣುಗೊಂಬೆ ಅದು. ಬಹಳ ತೂಕದ ಗೊಂಬೆ. ಟೇಬಲ್ ಮೇಲಿಟ್ರೆ ಟೇಬಲ್ ಮುರಿಯತ್ತೇಂತ ನೆಲದ್ಮೇಲಿಟ್ಟಿದ್ದೀನಿ. ಇದು ಆಗಾಗ್ಗೆ ಎದ್ದು 'ನೀರೂ... ನೀರೂ... ಕಾವೇರಿ... ಕಾವೇರಿ...' ಅಂತ ಕಿರುಚಿ ಮತ್ತೆ ಮಲಗ್ಬಿಡತ್ತೆ. ದಸರಾಗೆ ಆನೆ ಸಿಗದೆಯಿದ್ರೆ ಈ ಗೊಂಬೆ ಮೇಲೇ ಅಂಬಾರಿ ಹೊರಿಸ್ಬೋದೂಂತ ಒಬ್ಬ ಕಿಡಿಗೇಡಿ ಹೇಳ್ತಿದ್ದ. ಈ ತೂಕದ ಗೊಂಬೆ ಹೆಸರು ಪುರಚ್ಚಿ ತಲೈವಿ ಜಯಲಲಿತಾ ಗೊಂಬೆ ಅಂತ.

ಅದರ ಮುಂದೆ ಕಪ್ಪು ಕನ್ನಡಕ ಹಾಕ್ಕೊಂಡು ಪಂಚೆ ಉಟ್ಕೊಂಡಿರೋ ಗೊಂಬೆ ಇದೆಯಲ್ಲಾ, ಅದೂ ಒಂದು ಥರಾ ಬಾಯಾರಿಕೆ ಗೊಂಬೇನೇ. ವಯಸ್ಸಾಗಿ, ಸರಿಯಾಗಿ ನಿಲ್ಲಕ್ಕಾಗ್ದೆ ಹೊಗೆ ಹಾಕಿಸ್ಕೊಳೋ ಕಾಲ ಬಂದಿದ್ರೂ ಹೊಗೇನಿಕಲ್‌ನಲ್ಲಿ ಹೊಗೆ ಆಡ್ಸೋ ಕೆಲಸ ಬಿಟ್ಟಿಲ್ಲ. ಹೆಸರಿನಲ್ಲಿ ಕರುಣೆ, ಬ್ಯಾಂಕಿನಲ್ಲಿ ನಿಧಿ ಇಟ್ಕೊಂಡಿರೋ ಈ ಗೊಂಬೆ ಹೆಸರು ಕರುಣಾನಿಧಿ ಗೊಂಬೆ ಅಂತ.

ಅಲ್ನೋಡಿ, ದಂಡುಪಾಳ್ಯದಲ್ಲಿ ಮಾರಾಟಕ್ಕಿದ್ ಗೊಂಬೆ ಇದು. ಅದ್ಯಾಕೋ ಏನೋ ಇದರ ಬೆನ್ನಿನ ಮೇಲೆ ಬಟ್ಟೇನೇ ನಿಲ್ಲಲ್ಲ. ಈ ಗೊಂಬೆ ತೆನೆ ಹೊರಕ್ಕೆ ಹೋಗಿ ಕುಮಾರಣ್ಣನ ಹತ್ರ ಛೀಮಾರಿ ಹಾಕಿಸ್ಕೊಂಡು, ಎಡ್ಯೂರಪ್ಪನ ತೆಂಗಿನಕಾಯಿ ಅಂಗಡೀಲಿ ವ್ಯಾಪಾರಕ್ಕೆ ಹೋಗಿ ಬರೀ ಚಿಪ್ಪು ಪಡೆದು, ಫ್ಯಾನ್ ಕೆಳಗೆ ಕೂತು ಸುಧಾರಿಸ್ಕೊಳ್ಳಕ್ಕೆ ಹೋದಾಗ ಕರೆಂಟ್ ಹೋಗಿದ್ದನ್ನ ಕೀ ಕೊಟ್ಟ ತಕ್ಷಣ ಬಹಳ ಲಕ್ಷಣವಾಗಿ ವಿವರಿಸತ್ತೆ. ಇದರ ಹೆಸರು ಪೂಜಾ ಗಾಂಧಿ ಡಾಲ್. ಅಲ್ನೋಗ್ಬೇಡಿ ಬನ್ನಿ. ಅಲ್ಲಿರೋವೆಲ್ಲಾ ಮುಕ್ಕಾಗಿರೋ ಗೊಂಬೆಗಳು. ಮೀಸೆ ಕೆಳಗ್ಮಾಡ್ಕೊಂಡು ಸಿಡುಕ್ತಾ ಕಾಲ್ಮುರ್ಕೊಂಡಿರೋ ಡಾಲ್ ಹೆಸರು ಎಡ್ಡಿ ಡಾಲ್, ಅದರ ಪಕ್ಕ ಪೆಚ್ಚುಪೆಚ್ಚಾಗಿ ಹಲ್ಕಿರೀತಿರೋದು ಶೋಭಾ ಡಾಲ್, ರಥದಿಂದ ಬಿದ್ದು ಮುಖವೆಲ್ಲಾ ಪರಚಿಕೊಂಡಿರೋದು ಅಡ್ವಾಣಿ ಡಾಲ್. ಅವೆಲ್ಲಾ ಏನೇನೂ ಬೆಲೆಯಿಲ್ದಿರೋ ಡಾಲ್‌ಗಳು. ಇಲ್ಲಿ ವಾಪಸ್ ಬನ್ನಿ. ಅಲ್ಲಿ, ಎಲ್ಲಕ್ಕಿಂತ ಮೇಲಿನ ಷೆಲ್ಫಲ್ಲಿ ಇದೆಯಲ್ಲಾ, ಅದನ್ನು ತೋರಿಸೋದನ್ನೇ ಮರೆತಿದ್ದೆ. ಅದು ಈ ಎಲ್ಲಾ ಡಾಲ್‌ಗಳನ್ನೂ ಕಂಟ್ರೋಲ್ ಮಾಡತ್ತೆ. ಮನ್ಮೋಹನ್ ಡಾಲಂತೂ ಇದು ಕೂತ್ಕೋ ಅಂದ್ರೆ ಕೂಡತ್ತೆ, ನಿಂತ್ಕೋ ಅಂದ್ರೆ ನಿಲ್ಲತ್ತೆ. ರಾಜೀವ ಡಾಲ್‌ಗೆ ಜೊತೆಯಾಗಿ ಇಟಲಿ ಇಂಡಿಯಾಗೆ ಕಳಿಸಿಕೊಟ್ಟಂತಹ ಈ ಡಾಲ್‌ನ ಹೆಸರು ಹೈಕಮಾಂಡ್ ಡಾಲ್ ಅಂತ.

ಆಚೆಕಡೆ ಮೂಲೇಲಿ ಮನೆ ತರಹ ಇರೋದು ಏನು ಅಂದ್ರೆ? ಅದು ಒಂದು ವಿಚಿತ್ರ ಡಾಲ್ ಸಾರ್. ಅದು ಕೀ ಕೊಟ್ರೆ ಸಾಕು, "ನಾಯಿಯಂತೆ ಕೆನೆದಾಡು, ಕೋತಿಯಂತೆ ಬೊಗಳು, ಕುದುರೆಯಂತೆ ಒದೆ, ಕತ್ತೆಯಂತೆ ಹಲ್ಕಿರಿ, ಇವೇ ನಿನಗೆ ಇಂದಿನ ಟಾಸ್ಕ್" ಅಂತೆಲ್ಲಾ ಹೇಳೋ ಮನೆ ಷೇಪ್ಡ್ ಡಾಲ್. ಅದನ್ನ ಬಿಗ್ ಬಾಸ್ ಡಾಲ್ ಅಂತಾರೆ.

ಏನು? ಇವೆಲ್ಲಾ ಬಾಳಿಕೆ ಬರುತ್ವಾಂದ್ರೇ?




**ಆಡಿಸಿ ನೋಡಿ, ಬೀಳಿಸಿ ನೋಡಿ, ಒಡೆದುಹೋಗದು**
**ಪೊಳ್ಳೇ ಇರಲಿ ಟೊಳ್ಳೇ ಇರಲಿ ಎಂದು ಮುರಿಯದು**
**ಪೊಲಿಟಿಕಲ್ ಡಾಲ್‌ಗಳ ಗುಣವೇ ಹೀಗೆ**
**ಮುರಿಯದಿರುವುದು, ಎಂದೂ ಮುರಿಯದಿರುವುದು**

ನಾಳೆ ಬರ್ತೀರಾ? ಬನ್ನಿ. ನಿಮ್ಮ ಫ್ರೆಂಡ್ಸ್ ಗೂ ಇದರ ಬಗ್ಗೆ ಹೇಳಿ. ಬೈ... ವಿಷ್ ಯೂ ಎಂಡ್ ಯುವರ್ ಫ್ಯಾಮಿಲಿ ಎ ವೆರಿ ಹ್ಯಾಪಿ ದಸರಾ. ▪

## ಕನ್ನಡ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

**ಸಂಕ್ಷಿಪ್ತ ಮಾಹಿತಿ ಇಲ್ಲಿದೆ**

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

### INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್  ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

## ಸುಮ್ಕೆ ನಕ್ಬಿಡಿ




ಅಕ್ಕಳಾಪ್ಪ ಮತ್ತೆ ಎಲೆಕ್ಷನ್ ಬಂತೂ ಅನ್ನಸ್ತೈತೆ ! ಟೈಂ ಎಷ್ಟು ಬೇಗ ಓಡ್ತದೆ ಅಲ್ವಾ, ಮೊನ್ನೆತಾನೆ ಬಂದಂಗಿತ್ತು ... ಈಗ ಮತ್ತೆ.....

# ಧರ್ಮ



ಲೇಖಕರು: ಕನಕಾಪುರ ನಾರಾಯಣ



ಒಂದಾನೊಂದು ಕಾಲದಲ್ಲಿ ಋಷಿಯೊಬ್ಬನು ಭೋದನೆ - ತಪಸ್ಸನ್ನು ಮಾಡುತ್ತಾ ಊರಿಂದೂರಿಗೆ ಸಾಗುತ್ತಿದ್ದನು.ಹೀಗೇ ಸಾಗುತ್ತಿರಲು ಒಮ್ಮೆ ಒಂದು ಊರಿನ ಮುಂದೆ ಮರದಡಿಯಲ್ಲಿ ತಪಸ್ಸಿಗೆ ಕುಳಿತಿರಲು ಪಕ್ಷಿಯೊಂದು ಅವನ ತಲೆಯ ಮೇಲೆ ಗಲೀಜು ಮಾಡಿತು, ಅದರಿಂದ ಕೋಪಗೊಂಡ ಋಷಿಯು ಆ ಪಕ್ಷಿಗೆ ಶಪಿಸಿದನು, ಕೇವಲ ನೋಟದಿಂದಲೇ ಅದನ್ನು ಭಸ್ಮ ಮಾಡಿಬಿಟ್ಟನು.ಮತ್ತೊಂದು ದಿನ ದೂರ ಪ್ರಯಾಣ ಹೊರಟಿದ್ದ ಋಷಿಯು ಅದೇ ಮಾರ್ಗವಾಗಿ ಬಂದನು. ಕಮಂಡಲದಲ್ಲಿದ್ದ ನೀರು ಬಾಯಾರಿಕೆ ನೀಗಿಸಿದರೂ ಬಿಸಿಲಿಗೆ ಬಳಲಿದ್ದ ಆತನು ಹಸಿವಿನಿಂದ ಸ್ವಲ್ಪ ಆಹಾರ ಭಿಕ್ಷೆಗಾಗಿ ಒಂದು ಮನೆಯ ಮುಂದೆ ಬಂದು ನಿಂತು "ಭವತಿ ಭಿಕ್ಷಾಂದೇಹಿ"ಎಂದು ಕೂಗಿದನು.

ಆ ಮನೆಯಾಕೆ ಬಹಳ ತಡಮಾಡಿ ಹೊರಗೆ ಬಂದಳು,ಋಷಿಯ ಮುಖ ಸಿಟ್ಟಿಗೆ ತಿರುಗಿತ್ತು, ಕುಪಿತ ಋಷಿಯನ್ನು ಕುರಿತು"ಋಷಿವರ್ಯಾ ಸ್ವಲ್ಪ ತಾಳು ನನ್ನನು ಪಕ್ಷಿಯಂತೆ ಸುಡಬೇಡ, ಈ ಮನೆಯ ಗೃಹಿಣಿಯಾದ ನಾನು ಮೊದಲು ನನ್ನ ಮನೆವರ ಕೆಲಸ ಮಾಡುವುದು ನನ್ನ ಧರ್ಮ" ಎಂದಳು, ಋಷಿ ಶಾಂತನಾದ. ಧರ್ಮವನ್ನು ತಾನೂ ಪಾಲಿಸಬೇಕೆಂದು ಆಕೆಯನ್ನು "ನಾನೂ ಧರ್ಮದ ಪಾಠವನ್ನು ಕಲಿಯಬೇಕಿದೆ"ಎಂದನು. ಅದಕ್ಕವಳು ಧರ್ಮವ್ಯಾದನನ್ನು ಕಾಣಲು ಸೂಚಿಸಿದಳು.ಧರ್ಮವ್ಯಾದ ಒಬ್ಬ ಮಾಂಸದ ವ್ಯಾಪಾರಿ,ಋಷಿ ಆತನ ಬಳಿ ಹೋಗಲು ಆತ ತನ್ನೆಲ್ಲಾ ಗಿರಾಕಿ ಹೋಗುವವರೆಗೂ ಕಾಯಿಸಿದ,ನಂತರ ತನ್ನ ತಂದೆ ತಾಯಿಯರನ್ನು ವಿಚಾರಿಸಿ ನಂತರ ಋಷಿಯನ್ನು ಬಂದ ವಿಚಾರವಾಗಿ ಕೇಳಿದ,ಅಷ್ಟರಲ್ಲಿ ಋಷಿಗೆ ಸಾಕಷ್ಟು ಅರಿವುಮೂಡಿತ್ತು. ಆ ಕೂಡಲೇ ಅಲ್ಲಿಂದ ಹೊರಟು ಅಗಲಿದ್ದ ತನ್ನ ತಾಯಿತಂದೆಯರನ್ನು ಕಂಡು ಕ್ಷಮೆ ಯಾಚಿಸಿ, ಆಶೀರ್ವಾದ ಪಡೆದು ಅವರ ಪಾಲನೆಮಾಡುತ್ತಾ ತನ್ನ ಕೆಲಸವನ್ನೂ ಮುಂದುವರೆಸುತ್ತಾ ಧರ್ಮ ಪಾಲಿಸಿದ.▪

## ಶ್ರೀಖಂಡ್



**ಬೇಕಾಗುವ ಸಾಮಗ್ರಿಗಳು**

- ಎರಡು ಲೀಟರ್ ಗಟ್ಟಿ ಮೊಸರು
- ಮುನ್ನೂರು ಗ್ರಾಂ ಸಕ್ಕರೆ
- ಎರಡು ಗ್ರಾಂ ಕೇಸರಿ
- ಅರ್ಧ ನಿಂಬೇಹಣ್ಣು
- ಅಲಂಕರಿಸಲು ಒಂದಷ್ಟು ದ್ರಾಕ್ಷಿ, ಗೋಡಂಬಿ, ಇತ್ಯಾದಿ

**ಮಾಡುವ ವಿಧಾನ**

- ಗಟ್ಟಿ ಮೊಸರನ್ನು ಬಟ್ಟೆಯಲ್ಲಿ ಶೋಧಿಸಿ,ಚೆನ್ನಾಗಿ ಬಸಿದು ನೀರಿನ ಅಂಶ ತೆಗೆಯಿರಿ
- ಈ ಮೊಸರಿಗೆ ನಿಂಬೇರಸ, ಕೇಸರಿ ಸೇರಿಸಿ ಬೆರೆಸಿ
- ಸಕ್ಕರೆ ಬೆರೆಸಿ ಅದು ಕರಗುವವರೆಗೂ ಸೌಟಿನಿಂದ ಆಡಿಸುತ್ತಿರಿ. (ಮಿಕ್ಸಿಯನ್ನೂ ಬಳಸಬಹುದು)
- ಅಲಂಕಾರಕ್ಕೆ ದ್ರಾಕ್ಷಿ, ಗೋಡಂಬಿ ಚೂರು, ಪಿಸ್ತಾ ಇತ್ಯಾದಿಯನ್ನು ಸೇರಿಸಬಹುದು
- ಫ್ರಿಡ್ಜ್ ನಲ್ಲಿಟ್ಟು ತಣ್ಣಗಾದ ಬಳಿಕ ತಿನ್ನಲು ರೆಡಿ

**ಇನ್ನೂ ನೂರಾರು ರೆಸಿಪ್ಪಿಗಳಿಗೆ www.sugamakannada.com ಗೆ ಭೇಟಿಕೊಡಿ.**

ರೆಸಿಪಿ ಕೊಡ್ತೀರಾ!

## ಇದೇನ್ಲಾ ಇದು

೧. ಎರಡು ಜೋಡಿಗಳಿವು: ಹೋಗ್ತಾಬರ್ತಾ ಇರ್ತಾವೆ ಇವೆರಡು, ಹೋದರೆ ಬರಲಾರವು ಇವೆರಡು

೨. ಎಲೆಗೋಂದ್ಕಾಯಿ, ತಲೆಗೊಂದ್ಕಾಯಿ, ಆಟಕ್ಕೊಂದ್ಕಾಯಿ, ಊಟಕ್ಕೊಂದ್ಕಾಯಿ

ಉತ್ತರಕ್ಕೆ ಪುಟ ೧೦ ನೋಡಿ

**ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com**




Contact Mr Sudheendra Rao EMAIL
Mobile 0415 291 723




Contact Mr.Sathya Bhat EMAIL
Mobile 0412 918 511




Contact Mr Umesh EMAIL
Mobile 0401 034 456




Contact Mr Eranna Gotyal EMAIL
Mobile 0404 215 605

## ಕನ್ಯಾಧಾರೆ ...

ಬಂಧುಗಳ ಅರ್ಥೈಸು ಕಷ್ಟದಲಿ |
ಮಿತ್ರರನು ಅರ್ಥೈಸು ನಷ್ಟದಲಿ |
ಮಕ್ಕಳನು ಅರ್ಥೈಸು ವಾರ್ಧಕ್ಯದಲಿ |
ಧನಕನಕವನು ಅರ್ಥೈಸು ಸನ್ಮಾರ್ಗದಲಿ |
ನುಡಿಮುತ್ತುಗಳನು ಹಾರೈಸು ಪ್ರೀತಿ ವಿಶ್ವಾಸದಲಿ |
ನಿನ್ನನೀ ಅರ್ಥೈಸಿಕೊ ಏಕಾಂತದಲಿ |



ರಚನೆ: ಮಾಸ್ಟರ್ ಹಿರಣ್ಣಯ್ಯ

## ಅರುಣ ರಾಗ ...

ಮುರಳಿ ನಾದ ಮೋದನ
ಯಾವ ರಾಗದಲ್ಲಿ ನುಡಿಸಿ
ಮೋಹ ಗೈಯ್ಯುಲಿ ಮೋಹನ...

ಜಗವೆಲ್ಲವು ಸೊಗವಾಯಿತು
ಅರುಣ ಕಿರಣ ಸ್ಪರ್ಶಕೆ
ಮನ ನನ್ನದು ಶ್ರೀ ಹರಿಯೆ
ವಶವಾಯಿತು ಹರ್ಷಕೆ

ಅನುರಾಗವು ಸುರಭೋಗದ
ಸಂಜೀವನ ಸುರಿಸಿದೆ
ನವ ರಾಗದ ನವ ಜೀವನ
ನವ ಗಾನವು ನುಡಿಸಿದೆ

ಪೊರೆವ ನಿನ್ನ ಅಭಯ ಹಸ್ತ
ಸಿಗಲಿ ಜೀವ ರಾಶಿಗೆ
ನಿನ್ನ ಸಂಗ ಅಂತರಂಗ
ಇರಲಿ ನಿನ್ನೀ ರಾಧೆಗೆ... !

ರಚನೆ: ಮಾಲು, ಅಡಿಲೈಡ್

# ಹಾಸ್ಯ ಚಿಲುಮೆ



ಗುಂಡ: ನಿನ್ನ ಹೆಂಡತಿ ಯಾವಾಗ್ಲೂ ಯಾಕೆ ಕೋಪ ಮಾಡ್ಕೊಂಡ್ ಇರ್ತಾಳೆ?

ತಿಮ್ಮ :ಒಂದು ದಿನ ನಾನು ಅವ್ಳಿಗೆ "ನೀನು ಕೋಪ ಮಾಡ್ಕೊಂಡಾಗ ಸುಂದರವಾಗಿ ಕಾಣ್ತೀಯಾ" ಅಂದೆ ಅದಕ್ಕೆ ಯಾವಾಗ್ಲೂ ಊ

ಗುಂಡ:ಏನಯ್ಯ ಪಾಂಡು ನಿಮ್ಮ ಮನೇಲಿ 25 ಜನ, ಫಾಮಿಲಿ ಪ್ಲಾನಿಂಗ್ ನವರು ಬರಲೇ ಇಲ್ವಾ?

ಪಾಂಡು; ಬಂದಿದ್ರು,ಸ್ಕೂಲು ಅಂದ್ಕೊಂಡು ವಾಪಸ್ ಹೋದ್ರು.





### ಜಾಣ ಕರ್ನಾಟಕ

೧. ನರಸೀಪುರದ ತಿರುಮಕೂಡಲುವಿನಲ್ಲಿ ಸಂಗಮವಾಗುವ ಎರಡು ಪ್ರಮುಖ ನದಿಗಳು ಯಾವುವು?

೨. ಬಾಗಲಕೋಟೆಯ ಕೂಡಲ ಸಂಗಮದಲ್ಲಿ ಯಾವ ನದಿಗಳ ಮಿಲನವಾಗುತ್ತದೆ?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

### ಇದೇನ್ಲಾ ಇದು – ಉತ್ತರ

೧. ಬಡತನ-ಸಿರಿತನ, ಪ್ರಾಣ–ಮಾನ

೨. ಅಡಕೆಕಾಯಿ, ಸೀಗೇಕಾಯಿ, ಪಗಡೆಕಾಯಿ, ತೆಂಗಿನಕಾಯಿ



ಲೇಖಕರು: ಸ್ಮಿತಾ ಮೇಲ್ಕೋಟೆ

# ಗೊಂಬೆ ಹರಟೆ



"ಏನ್ರೀ ನಿಂತು ನಿಂತು ಕಾಲು ನೋಯ್ತಾ ಇಲ್ಲವೇ ?"

"ಅಯ್ಯೋ ಸುಮ್ಮನೆ ನಿಂತುಕೋ ಇನ್ನೊಂದು ಹತ್ತು ದಿನ ದಸರಾ ಹಬ್ಬ ... ಈ ದೇಶದಲ್ಲಿ ಹೇಗೆ ಮಾಡ್ತಾರೆ ಅಂತ ನೋಡೋಕೆ , ನಿಂಗೆ ಒಂದು ಚೂರು ಕುತೂಹಲ ಬೇಡವೇ ?"

ಹೀಗೆ ಯಾರು ಹೇಳಿದ್ದು ಅಂತ ತಲೆ ಕೆಡಿಸಿಕೊಂಡಿದ್ದೀರಾ? ಪಕ್ಕದಲ್ಲಿ ನಿಂತ ಸಾಂಪ್ರದಾಯಿಕ ಅಲಂಕಾರ ಮಾಡಿಕೊಂಡ ಗಂಡು ಹೆಣ್ಣು . ಸಮುದ್ರದಲ್ಲಿ ಪ್ರಯಾಣ ಮಾಡಿ ಬಂದ ಬೊಂಬೆಗಳು ಹೊರದೇಶದ ಒಂದು ಮನೆಯಲ್ಲಿ ಜೋಡಿಯಾಗಿ ನಿಂತು ನಡೆಸುವ ಸಂಭಾಷಣೆ ಏನೆಂದು ಕೇಳೋಣವೇ?

**ಹೆಣ್ಣು ಬೊಂಬೆ**: ಏನ್ರೀ ನನ್ನ ಬ್ಲೌಸ್ ಚೆನ್ನಾಗಿ ಹೊಲೆದಿದ್ದಾನ ಟೈಲರ್ ನೋಡಿ. ಹೊರ ದೇಶಕ್ಕೆ ಹೋಗಬೇಕು ಅಂತ ಅರ್ಜೆಂಟ್ ಮಾಡಿದ್ದಕ್ಕೆ , ಕೋಚು ಕೋಚಾಗಿ ಹೊಲೆದು ಬೇಗ ಕೊಟ್ಟು ಬಿಟ್ಟಿದ್ದಾನೆ . ಯಾಕೋ ಮೇಲಿನ ಸಾಲಿನ ದಂಪತಿ ನೋಡಿ ಗಪ್ ಚುಪ್ ಅಂತ ನಿಂತು ಬಿಟ್ಟಿದ್ದಾರೆ !!
**ಗಂಡು ಬೊಂಬೆ** : ಚಿಕ್ಕ ಚಿಕ್ಕ ವಿಷಯಗಳಿಗೆ ನನ್ನ ತಲೆ ತಿನ್ನಬೇಡ. ನೋಡು ಮನೆಯವರು ಎಷ್ಟು ಶ್ರದ್ಧೆಯಿಂದ ಎಲ್ಲಾ ರೀತಿಯ ಬೊಂಬೆಗಳನ್ನು ಸೀ ಮೇಲ್ ನಲ್ಲಿ ತರಿಸಿ , ಏಳು ಮೆಟ್ಟಿಲು ಕಟ್ಟಡ ಮಾಡಿ, ರೇಷ್ಮೆ ಸೀರೆಯ ಮಡಿಕೆಯ ಮೇಲೆ ನಮ್ಮನ್ನು ಕೂರಿಸಿರುವುದು ಅದೃಷ್ಟ ಅಲ್ಲವೇನೆ ?

**ಹೆಣ್ಣು ಬೊಂಬೆ** : ರೀ ನೋಡ್ರೀ ಪಟ್ಟದ ಬೊಂಬೆಗಳಿಗೆ ಜಂಬ ಬಂದ ಹಾಗೆ ತೋರುತ್ತೆ. ಏನು ಸಮಾಚಾರ ಹೇಗಿದ್ದೀರಾ ಅಂತ ವಿಚಾರಿಸೋದು ಬೇಡವೆ , ಈಗ ತಾನೇ ಬಂದು ಇಲ್ಲಿ ನಿಂತವರನ್ನ ?
**ಗಂಡು ಬೊಂಬೆ**: ನೋಡು ಪಟ್ಟದ ಬೊಂಬೆ ಅಂತ ಯಾಕೆ ಇಟ್ಟಿರೋದು.. ಎಲ್ಲರ ಹತ್ತಿರ ಸಲ್ಲಾಪ ಮಾಡಿಕೊಂಡು ನಿಂತರೆ ಅವರನ್ನು ಕೆಳಗಿನ ಸಾಲಿನಲ್ಲಿ ನಿಲ್ಲಿಸಿ ಬಿಡುತ್ತಾರೆ . ಅದಕ್ಕೆ ಅವರು ಗಂಬೀರವಾಗಿರೋದು .

**ಹೆಣ್ಣು ಬೊಂಬೆ**: ಅಲ್ಲಿ ನೋಡ್ರೀ ಹನ್ನೊಂದು ಮಂದಿ ಕ್ರಿಕೆಟ್ ಆಟಗಾರರು ಬಿಟ್ಟ ಕಣ್ಣು ಬಿಟ್ಟಂಗೆ ನಿಂತಿದ್ದಾರಲ್ಲ. ಏನಾಯಿತಪ್ಪ ?
**ಗಂಡು ಬೊಂಬೆ** : ಅವರಾ, ಪಾಪ ಔಟ್ ಕೊಟ್ಟವ ಅಂಪೈರ್ ಮತ್ತೆ ಔಟ್ ಇಲ್ಲ ಅಂದು ಬಿಟ್ಟಿದ್ದಾನೆ .

**ಹೆಣ್ಣು ಬೊಂಬೆ**: ಯಾಕ್ರೀ ನೀವು ಒಂದೇ ಸಮ ಆ ಬಾರ್ಬಿ ಬೊಂಬೆ ಕಡೆ ನೋಡುತ್ತಿದ್ದೀರ, ಹೀಗೆ ಆದ್ರೆ ಮುಂದೆ ನಾನು ಸುಮ್ಮನಿರಲ್ಲ ನೋಡಿ.
**ಗಂಡು ಬೊಂಬೆ** : ಅಯ್ಯೋ ನಾನೆಲ್ಲಿ ಬೇಕಂತ ನೋಡುತ್ತಿದ್ದೇನೆ.. ನನ್ನ ಆ ಕಡೆ ತಿರುಗಿಸಿ ನಿಲ್ಲಿಸಿ ಬಿಟ್ಟಿದ್ದಾರೆ. ನನ್ನ ಕಣ್ಣು ಬೆನ್ನಲಿಲ್ಲ ನೋಡು ಅದಕ್ಕೆ ಎದುರಿಗೆ ಇರುವವರನ್ನು ನೇರ ದೃಷ್ಟಿಸಿ ನೋಡಬೇಕಾಗಿದೆ .

**ಹೆಣ್ಣು ಬೊಂಬೆ** : ಏನ್ರೀ ಇಲ್ಲಿ ನೋಡಿ ವಿಚಿತ್ರ ... ನಮ್ಮನ್ನು ನೋಡಲು ಬಂದ ಮಕ್ಕಳ ತಲೆ ಯಾಕೆ ಹಾಗೆ ಬಗ್ಗಿ ಹೋಗಿದೆ? ಎಲ್ಲರಿಗೂ ಕತ್ತು ನೆಟ್ಟಗಿಲ್ಲವೇ?
**ಗಂಡು ಬೊಂಬೆ** : ಅಯ್ಯೋ ನೀನು ಏನೂ ಚಿಂತೆ ಮಾಡಬೇಡವೇ .. ಈಗಿನ ಕಾಲದ ಮಕ್ಕಳು ನಮ್ಮಂತ ಸುಮ್ಮನೆ ನಿಂತ ಬೊಂಬೆ ಯಾಕೆ ನೋಡ್ತಾರೆ.. ಅವರಾಡಿಸಿದ ಹಾಗೆ ಪರದೆಯ ಮೇಲೆ ಕುಣಿಯುವ ಬೊಂಬೆ ಮಾತ್ರವೇ ನೋಡುವುದು . ಆದ್ದರಿಂದಲೇ ಅವರ ಕತ್ತುಗಳು ಬಾಗಿರುವುದು.

**ಹೆಣ್ಣು ಬೊಂಬೆ** : ಅಲ್ಲಿ ನೋಡ್ರೀ ಶೆಟ್ಟ - ಶೆಟ್ಟಿ ಬೊಂಬೆಗಳು ಯಾಕೋ ಕಣ್ಣು ಮುಚ್ಚಿ ಕೂತಿದ್ದಾರೆ ನಿದ್ದೆ- ಗಿದ್ದೇನೋ ?
**ಗಂಡು ಬೊಂಬೆ** : ಅವರಿಗೇನು ನಿದ್ದೆ... ಪ್ರಯಾಣದಲ್ಲಿ ಚೆನ್ನಾಗಿ ಮಲಗಿದ್ದಾರೆ. ಈಗ ಎದುರಿಗೆ ಇಟ್ಟಿರುವ ಪ್ರಸಾದ ನೋಡಬಾರದು ಎಂದು ಕಣ್ಣು ಮುಚ್ಚಿದ್ದಾರೆ. ಅವರುಗಳು ಡಯಟ್ ಮಾಡ್ತಾ ಇದ್ದಾರೆ .

**ಹೆಣ್ಣು ಬೊಂಬೆ** : ಅದೇನ್ರೀ ಅದು ಈ ಪಾಟಿ ದೊಡ್ಡ ಪ್ರಾಣಿ.. ನಾನಂತೂ ಕಂಡೇ ಇಲ್ಲ ... ನಮ್ಮೂರಿನ ಹುಲಿ ಸಿಂಹಗಳನ್ನು ಒಂದೇ ಕೈಯಲ್ಲಿ ಹಿಡಿದು ನುಂಗುವ ಹಾಗಿದೆ.
**ಗಂಡು ಬೊಂಬೆ** : ಅದು ಬಹಳ ಹಿಂದಿನ ತಲೆಮಾರಿನ ಪ್ರಾಣಿ ಡೈನೋಸಾರ್ ಎಂದು . ಅದರ ಸಂತತಿ ಈಗಿಲ್ಲ ಕಣೇ.

**ಗಂಡು ಬೊಂಬೆ** : ಉಶ್ ! ಮನೆಯವರು ಬರುತ್ತಾ ಇದ್ದಾರೆ ಗೊಂಬೆ ಆರತಿ ಮಾಡುವುದಕ್ಕೆ ... ಈಗ ನೀನು ನಿನ್ನ ಬಾಯಿಗೆ ಬೀಗ ಹಾಕಮ್ಮ ...

ಹೀಗೆ ಗೊಂಬೆ ಹರಟೆ ನಡೆಯುತ್ತಿದ್ದಾಗ, ಮನೆಯವರು ಪೂಜೆ, ನೈವೇದ್ಯ ಮಾಡಿ , ಆರತಿ ಬೆಳಗಿ ...
ಗೊಂಬೆ ಬಾರಮ್ಮ ನಮ್ಮ ಮಕ್ಕಳ ಆಟದ ಗೊಂಬೆ ಬಾರಮ್ಮ ...
ಮಕ್ಕಳ ಐಪ್ಯಾಡ್ /ಐಫೋನ್ ಮರೆಸಿ ಕಣ್ಣನು ತೆರೆಸಮ್ಮಾ ,
ಎಂದು "ವಾರ ಬಂತಮ್ಮ ... ಗುರುವಾರ ಬಂತಮ್ಮ" ಧಾಟಿಯಲ್ಲಿ ಹಾಡುತ್ತಾ ಬಂದವರಿಗೆಲ್ಲಾ ಗೊಂಬೆ ಬಾಗನ ಹಂಚುವಲ್ಲಿಗೆ ... ಗೊಂಬೆ ಹರಟೆ ಸಮಾಪ್ತಿ !!!! ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ



ಕನಕಾಪುರ ನಾರಾಯಣ
ಇವರ "ಚುಕ್ಕೆ ಮೊಗ್ಗು"



ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"



ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

# ಅಸಹಾಯಕತೆ, ನೋವು ಮತ್ತು.... ಶ್ರಧ್ಧಾಂಜಲಿ



ಲೇಖಕರು: ಉಲ್ಲಾಸ್ ಅರಭಾವಿ

ಹೀಗೊಂದು ಲೇಖನ ಬರೆಯಬೇಕೆಂದು ಬಹಳ ದಿನಗಳಿಂದ ಪ್ರಯತ್ನಿಸಿದ್ದರೂ ಆಗಿರಲಿಲ್ಲ. ಬಹಳ ಸಲ ಹೀಗೇ ಆಗುತ್ತದೆ, ನಾವಂದುಕೊಂಡದ್ದನ್ನ ಎಷ್ಟೇ ಪ್ರಯತ್ನಿಸಿದರೂ ಮಾಡಲಾಗುವದೇ ಇಲ್ಲ. ಅದಕ್ಕೆ ಕಾರಣಗಳೇ ಇರದಿದ್ದರೂ ಪ್ರಯತ್ನ ಕೈಗೂಡುವುದಿಲ್ಲ. ಕಾರ್ಯ ಬಾಹುಳ್ಯವೆಂದೇನಲ್ಲ, ಸುಖಾ-ಸುಮ್ಮನೆ ಕುಳಿತಿದ್ದರೂ ಬರೆಯಲಿಕ್ಕೆ ಆಗುವದಿಲ್ಲ. ಅದೇ ಒಂದೊಂದು ಸಲ, ಎಷ್ಟೇ ಕೆಲಸದ ಒತ್ತಡಗಳಿದ್ದರೂ, ಅನಾರೋಗ್ಯವಿದ್ದರೂ, ತಲೆಯಲ್ಲಿ ವಿಚಾರಗಳು ತಾಕಲಾಡತೊಡಗಿ ಕೈ ತಾನಾಗೇ ಓಡತೊಡಗುತ್ತದೆ, ನೋಡ ನೋಡುವದರಲ್ಲೇ ವಿಚಾರಗಳು ಅಕ್ಷರ ರೂಪ ತಾಳಿ ಬಿಡುತ್ತವೆ. ಈ ಸಲ ನನಗಾದದ್ದೂ ಹೀಗೆಯೇ.

ಮಿತ್ರರೊಬ್ಬರು ನಾನು ಒಂದಷ್ಟು ಬರೆದುದನ್ನು ನೋಡಿ 'ಹೊರನಾಡ ಚಿಲುಮೆ' ಯಲ್ಲಿ ಭಾಗವಹಿಸಬಹುದು ಎಂದಾಗ ಸಖೇದಾಶ್ಚರ್ಯವಾಗಿತ್ತು. ನುರಿತ ಹಾಗೂ ಹಿರಿಯ ಬರಹಗಾರರ ಮಧ್ಯೆ ನನ್ನಂಥಾ ಹವ್ಯಾಸಿ ಬರಹಗಾರನ ಲೇಖನ ನೆನೆಸಿಕೊಂಡು ಸಂಕೋಚ ಉಂಟಾಗಿದ್ದು ನಿಜವಾಗಿದ್ದರೂ, "ಪ್ರಯತ್ನಿಸುವ" ಎಂದುಕೊಂಡೆ. ಆದರೆ ಅಂದುಕೊಂಡ ಹಾಗ ಬರೆಯಲಾಗಿರಲಿಲ್ಲ. ಇನ್ನೇನು ನನ್ನ ಕೈಲಾಗುವುದಿಲ್ಲ ಅಂತ ತಿಳಿಸಿಬಿಡೋಣ ಅಂದುಕೊಳ್ಳುವಷ್ಟರಲ್ಲಿ ಅದೊಂದು ಘಟನೆಯಾಗಿತ್ತು. ಎರಡು ದಿನಗಳ ಹಿಂದೆ ನನ್ನ ಮಗಳ ಜೊತೆ ಆಟವಾಡ್ತಾ ನನ್ನ ಬಾಗಿದ ಬೆನ್ನು ಏಳಲೇ ಇಲ್ಲ. ಎದ್ದು ನಿಲ್ಲಲಾಗದು, ಕುಳಿತು ಕೊಳ್ಳುವದಕ್ಕೂ ಆಗದು, ಮಲಗಿದರೂ ನೋವು, ಅಸಾಧ್ಯ ನೋವು. ಬೆನ್ನು ಹುರಿಯಾಳದಿಂದ ಹಿರಿ ಹಿರಿದು ಬರುತ್ತಿತು ನೋವು. ಇಂಥಾ ಅವಸ್ಥೆಯಲ್ಲಿ ಎರಡು ದಿನ ಕಳೆದು ನೋವು ಸ್ವಲ್ಪ ಹಿಡಿತಕ್ಕೆ ಬಂದ ಮೇಲೆ, ಹಾಸಿಗೆ ಹಿಡಿದು ಬೇಜಾರಾದ ಸಂಧರ್ಭದಲ್ಲಿ ಸಿಕ್ಕ ಸಮಯವನ್ನ ಬಿಡಬಾರದು ಅಂದುಕೊಂಡು ನನ್ನ ಪುಟ್ಟ ಪುಸ್ತಕ ಪ್ರಪಂಚವನ್ನ ತಡಕಾಡಿದೆ. ಕೈಗೆ ಸಿಕ್ಕಿದ್ದು ಬ್ರಿಗೇಡಿಯರ್ ಜಾನ್ ದಳವಿ ರಚಿತ 'ದಿ ಹಿಮಾಲಯನ್ ಬ್ಲಂಡರ್' ನ ರವಿ ಬೆಳಗೆರೆಯವರ ಕನ್ನಡ ಅನುವಾದ.




ನಮ್ಮ ಬಿಡುವಿಲ್ಲದ ಜೀವನ ಶೈಲಿಯಲ್ಲಿ ಹಠಾತ್ತಾಗಿ ಹೀಗೆ ಬರುವ ಬಿಡುವಿನ ಸಮಯವಿರುತ್ತದಲ್ಲ, ಆಗ ಮನಸ್ಸು ದಿನ ನಿತ್ಯದ ವಾಡಿಕೆಯ ವಿಚಾರಗಳನ್ನ ಮಾಡದೇ ಬೇರೆಯದೇ ಯೋಚನೆಯ ಜಾಡು ಹಿಡಿಯುತ್ತದೆ. 'ಹಾಸಿಗೆ-ವಾಸಿ' ಯಾದ ನನ್ನ ಮನಸ್ಸು ಮಾಡಿದ್ದೂ ಅದನ್ನೇ. ಬಂಧು ಬಳಗದವರು ಕ್ಷೇಮ ಸಮಾಚಾರ ವಿಚಾರಿಸತೊಡಗಿದ್ದು, ನನ್ನ ಹೆಂಡತಿ ಮಗಳ ಧಾವಂತ, ಸ್ನೇಹಿತರ ಕರೆಗಳು ಇದನ್ನೆಲ್ಲಾ ನೋಡಿ ನಾನೊಬ್ಬ ಅದೃಷ್ಟವಂತ ಅಂದುಕೊಂಡೆ. ನಮ್ಮ ನಮ್ಮ ಜನ ಪೀಡೆ ಗೊಳಗಾದರೆ, ನಾವು ಹೇಗೆ ವಿಚಲಿತರಾಗುತ್ತೇವೆ, ಖಿನ್ನರಾಗುತ್ತೇವೆ ಅಂತೆಲ್ಲಾ ನನ್ನ ಯೋಚನಾಲಹರಿ ಹರಿಯತೊಡಗಿತು. ಹಾಗೂ 'ದಿ ಹಿಮಾಲಯನ್ ಬ್ಲಂಡರ್' ವಿಶದಿಸುವ ಭಾರತೀಯ ಸೈನಿಕರ ದುರಾದೃಷ್ಟದ ಜೊತೆ ತಾಳೆ ಹಾಕತೊಡಗಿತು. ಈ ನನ್ನ ಲೇಖನ ಮೂಡಿ ಬಂದಿದ್ದು ಇಂಥದೇ ಒಂದು ಖಿನ್ನ ಮೂಡಿನಲ್ಲಿ.

ಈ ಪುಸ್ತಕದಲ್ಲಿ ಬರುವ ವಿಷಯಗಳೆಲ್ಲ ಧೀರ ಸೇನಾಪತಿಯೊಬ್ಬ ಮೆಲುಕು ಹಾಕಿ ಬರೆದ ಸತ್ಯಘಟನೆಗಳು, ಮತ್ತು ಇದರ ಅಂತ್ಯ ಹೇಗೆ ಆಗುವದು ಎಂಬ ಅರಿವು ಇದ್ದೇ ಓದಲು ಶುರುವಿಟ್ಟುಕೊಂಡೆ. ಭಾರತ ಮತ್ತು ಚೈನಾ ದೇಶದ ನಡುವೆ ಆದ ೧೯೬೨ ರ ಯುದ್ಧ ಸನ್ನಿವೇಶವನ್ನ ವಿವರಿಸುವ ಈ ಕೃತಿಯಲ್ಲಿ ಹೇಗೆ ನಮ್ಮ ದೇಶದ ವೀರ ಯೋಧರು ಶತ್ರುವಿನೊಡನೆ ಹೋರಾಡಿ ಮಡಿದರು ಅನ್ನುವದನ್ನ ಮನ ಮಿಡಿಯುವ ಹಾಗೆ ವಿವರಿಸಲಾಗಿದೆ. ಬ್ರಿಗೇಡಿಯರ್ ಜಾನ್ ದಳವಿ ಅವರು ಸ್ವತಃ ಆ ಯುದ್ಧದಲ್ಲಿ ಭಾಗಿಯಾಗಿದ್ದಲ್ಲದೆ, ಯುದ್ಧ ಕೈದಿಯೂ ಆಗಿ ಚೀನಿಯರ ಕೈಗೆ ಸೆರೆ ಸಿಕ್ಕಿ ಬಿಡುಗಡೆ ಆದವರು. ಒಂದು ದೇಶದ ಸೈನ್ಯ ರಚನೆ ಹೇಗಿರಬೇಕು ಆದರೆ ಆ ಯುದ್ಧ ಕಾಲದಲ್ಲಿ ನಮ್ಮ ಸೈನ್ಯ ಹೇಗಿತ್ತು? ಒಬ್ಬ ಸೈನಿಕ ಏನೆಲ್ಲಾ ಸೌಲಭ್ಯಗಳನ್ನ ಹೊಂದಿರಬೇಕು ಆದರೆ ನಮ್ಮ ಸೈನಿಕರ ಪಾಡು ಏನಾಗಿತ್ತು? ಜಯಶಾಲಿಯಾಗಲು ಸೈನಿಕರನ್ನ ಹೇಗೆ ಹುರಿದುಂಬಿಸಿ ಅವರಲ್ಲಿ ಕೆಚ್ಚು ತುಂಬಬೇಕು ಆದರೆ ನಮ್ಮ ಸೈನಿಕರ ಮನೋಸ್ಥೈರ್ಯ ಯಾವ ಮಟ್ಟಕ್ಕೆ ಕುಗ್ಗಿತ್ತು? ಹೀಗೆ ಒಂದು ದುರಾದೃಷ್ಟವಂತ ತುಕಡಿಯ ಬಗ್ಗೆ ಹೇಳುತ್ತಾ ಸಾಗುತ್ತದೆ 'ದಿ ಹಿಮಾಲಯನ್ ಬ್ಲಂಡರ್'. ನಮ್ಮ ಸೈನ್ಯದಲ್ಲಿದ್ದ ರಾಜಕಾರಣ, ಸ್ವಜನ ಪಕ್ಷಪಾತ, ಮುಂದಾಲೋಚನೆಯ ಕೊರತೆ, ಇವೆಲ್ಲವನ್ನೂ ಒಬ್ಬ ಸೇನಾಧಿಪತಿಯಾಗಿ ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಾ ಹೋಗುತ್ತಾರೆ ಬ್ರಿಗೇಡಿಯರ್ ಜಾನ್ ದಳವಿಯವರು.

ಸ್ವಾರ್ಥ ರಾಜಕಾರಣ ಮತ್ತು ಕೆಲ ಸೇನಾ ಅಧಿಕಾರಿಗಳ ಮೂರ್ಖತನ ದೇಶದ ಬಡ ಸೈನಿಕರನ್ನ ಅಕ್ಷರಶಃ ಮೃತ್ಯುಕೂಪದಲ್ಲಿ ತಳ್ಳಿದ್ದವು. ಅತ್ತ ಬಡ ಸೈನಿಕ ಕೊನೆಯ ಕಾಡತೂಸು ಇರುವವರೆಗೆ ಹೋರಾಡುತ್ತ ಕೊನೆಯುಸಿರೆಳೆಯುತ್ತಿರಬೇಕಾದರೆ, ಯುದ್ಧಕ್ಕೆ ಕಾರಣರಾದ ಮಹಾ-ಮಹಿಮರು ತಮ್ಮ ನೆಮ್ಮದಿಯನ್ನ ಇಮ್ಮಡಿ ಮಾಡಿಕೊಳ್ಳುವದರಲ್ಲಿ ನಿರತರಾಗಿದ್ದರು. ಸೈನಿಕನಾದರೋ ತಾಯ್ನಾಡಿನ ಋಣವನ್ನ ತನ್ನ ರಕ್ತ ಹರಿಸಿ ತೀರಿಸಿದ, ಆದರೆ 'ಪಂಡೀತ' ನೆಂದು ಕೇವಲ ಒಂದು ಪಂಗಡದ ಪ್ರತ್ಯಯದಿಂದ ಪ್ರಸಿದ್ಧಿ ಪಡೆದರೆ ನಿಜವಾಗಿಯೂ 'ಪಂಡೀತ'ರಾಗಲು ಸಾಧ್ಯವೇ? ಎಂಬುದನ್ನ ತೋರಿಸಿಕೊಟ್ಟ ಒಬ್ಬ ಬೇಜವಾಬ್ದಾರಿ ಪ್ರಧಾನಿ, ತಿಕ್ಕಲುತನದ ಪರಮಾವಧಿ ಅಂದರೇನು ಅನ್ನೋದನ್ನ ತೋರಿಸಿದ 'ಪಂಡೀತ'ರ ರಕ್ಷಣಾ ಸಚಿವ ಹಾಗೂ ಮೂರ್ಖತನವನ್ನೇ ಮಾನದಂಡವಾಗಿರಿಸಿಕೊಂಡು ಭಾರತೀಯ ಸೇನೆಯ ಗೌರವವನ್ನ ಮಣ್ಣು ಪಾಲು ಮಾಡಿದ ಸೇನಾ ಪ್ರಮುಖ, ಈ ತ್ರಿವಳಿಗಳ ಅವಿವೇಕದಿಂದ ನಮ್ಮ ದೇಶ ತನ್ನ ಮಾನ ಹಾಗೂ ಯೋಧರನ್ನ ಕಳೆದುಕೊಂಡ ಪರಿ ಇದೆಯಲ್ಲ ಅದನ್ನ ಶಬ್ದಗಳಲ್ಲಿ ವಿವರಿಸಲು ಸಾಧ್ಯವೇ? ಪ್ರಯತ್ನಿಸುತ್ತದೆ 'ದಿ ಹಿಮಾಲಯನ್ ಬ್ಲಂಡರ್'...

ಮುಂದಿನ ಪುಟ ನೋಡಿ

# ಅಸಹಾಯಕತೆ, ನೋವು ಮತ್ತು.... ಶ್ರಧ್ಧಾಂಜಲಿ




ಹಾಗೆ ನೋಡಿದರೆ ನಮ್ಮ ಸೈನ್ಯವನ್ನ ನಾಶ ಮಾಡಲು ಶತ್ರುಗಳು ಗುಂಡು ಹಾರಿಸದೆ ಇದ್ದಿದ್ದರೂ ಆಗುತ್ತಿತ್ತು. ಕೇವಲ ಆಹಾರದ ಕೊರತೆಯಿಂದ ಮತ್ತು ಚಳಿಯಿಂದ ಭಾರತೀಯ ಯೋಧರು ಸತ್ತು ಹೋಗುತ್ತಿದರು. ಯುದ್ಧ ಮಾಡಲು ಬೇಕಾದ ಮದ್ದು ಗುಂಡುಗಳು, ಬಂದೂಕುಗಳು ಒತ್ತಟ್ಟಿಗಿರಲಿ, ಹೊಟ್ಟೆಗೆ ಸರಿಯಾಗಿ ಕೂಳಾಗಲಿ, ಹಿಮಾಲಯದ ಕೊರೆಯುವ ಚಳಿಯನ್ನ ತಡೆದುಕೊಳ್ಳಲು ಬೇಕಾದ ಸಮವಸ್ತ್ರವಾಗಲಿ, ಹಿಮದಲ್ಲಿ ಹುದುಗಿ ಹೋಗುತ್ತಿದ್ದ ಕಾಲುಗಳನ್ನ ರಕ್ಷಿಸಲು ಯೋಗ್ಯವಾದ ಬೂಟುಗಳಾಗಲಿ, ಕೊರೆಯುವ ಚಳಿಗಾಳಿಯಲ್ಲಿ ದಿನ ಕಳೆಯಲು ಬೇಕಾದ ಗಟ್ಟಿ ಡೇರೆಗಳಾಗಲಿ ಇವಾವವೂ ನಮ್ಮ ಸೈನಿಕರಲ್ಲಿರಲಿಲ್ಲ. ವಿಶಾಲ ಬಿಳಿ ಹಿಮಾಚ್ಛಾದಿತ ಪರ್ವತಗಳ ಮೇಲೆ ಬಿದ್ದು ಪ್ರತಿಫಲನಗೊಂಡ ಸೂರ್ಯನ ಕಿರಣಗಳನ್ನ ನಿರಂತರವಾಗಿ ಬರಿ ಕಣ್ಣಿನಲ್ಲಿ ನೋಡಿ ನೋಡಿ ಒಂದು ಹಂತದಲ್ಲಿ ಕುರುಡನಾಗಿ ಶತ್ರು ಸೈನ್ಯವೆಲ್ಲಿದೆ ಎಂದು ಕೂಡ ತಿಳಿಯದೆ ಅನ್ಯಾಯವಾಗಿ ಸತ್ತು ಹೋದ ಸೈನಿಕನಿಗೆ ಮಂಜಿನಲ್ಲಿ ಧರಿಸುವ ಕನ್ನಡಕ ಒದಗಿಸಿದ್ದರೆ ಆ ಬಡಪಾಯಿ ಇನ್ನೊಂದು ಸುತ್ತು ಹೊರಾಡುತ್ತಿದ್ದನೇನೋ? ಅಂಥಾ ಬಡ ಸೈನಿಕನ ಹತಾಶ ಮನೋಭಾವನೆಯನ್ನ ಕೇವಲ ಕಲ್ಪಿಸಿಕೊಂಡರೂ ಸಾಕು ಮನ ವಿಷಾದದಿಂದ ಬಾಡುತ್ತದೆ, ಹೋರಾಡಲು ಕಾಡತೂಸು ಇರದ ಸಂಧರ್ಭದಲ್ಲಿ ಬೇರೆ ದಿಕ್ಕಿಲ್ಲದೇ ಶತ್ರುವಿನ ಗುಂಡಿಗೆ ಬರಿಎದೆಗೊಟ್ಟು ಅಸಹಾಯಕವಾಗಿ ಮೈ ಚೆಲ್ಲಿದ ಕ್ಷಣ ನೆನೆಸಿಕೊಂಡರೆ ಮನ ಮಿಡಿಯುತ್ತದೆ.

ಒಬ್ಬ ಸೈನಿಕನಿಗೆ ಬೇಕಾದ ಕನಿಷ್ಠ ಯುದ್ಧ ಸೌಲಭ್ಯಗಳನ್ನ ಒದಗಿಸದೆ ಒಂದು ಇಡೀ ಬಟಾಲಿಯನ್ ನಷ್ಟು ಸೈನ್ಯವನ್ನ ಯಾರಿಗೂ ಬೇಡದ ಯುದ್ಧಕ್ಕೆ ಕೇವಲ ತಮ್ಮ ಸ್ವಪ್ರತಿಷ್ಠೆ ಮತ್ತು (ಇಲ್ಲದ?) ಮಾನ ಉಳಿಸಿಕೊಳ್ಳುವದಕ್ಕೊಸ್ಕರ ಅಕ್ಷರಶಃ ಬಲಿ ಕೊಟ್ಟರಲ್ಲಾ 'ಚಾಚಾ' ಎನ್ನಿಸಿಕೊಂಡವರು. ಒಂದಿಡೀ ದೇಶದ ಜನರು ಅಕ್ಕರೆಯಿಂದ 'ಚಾಚಾ' ಅಂತ ಕರೆದು ಮುಗ್ಧ ಪ್ರೀತಿ ತೋರಿದರಲ್ಲ, ಪ್ರತಿಯಾಗಿ ಅದೇ 'ಚಾಚಾ' ತನ್ನ ಸಾವಿರಾರು ಸೈನಿಕ ಬಂಧುಗಳಿಗೆ ತೋರಿದ ಪ್ರೀತಿ ಇದೇನಾ? ಯಕಃಶ್ಚಿತ್ ಬೆನ್ನು ನೋವು ಅಂತ ನನ್ನ ಬಂಧು ಬಳಗ ನನ್ನನ್ನ ವಿಚಾರಿಸಿಕೊಂಡ ಪರಿ ನೋಡಿ ನಾನು ಅದೃಷ್ಟವಂತನೆಂದುಕಕೊಂಡೆ, ಆದರೆ ದೇಶ ಕಾಯೋವಂಥ ಮಹೋನ್ನತ ಕಾರ್ಯದಲ್ಲಿ ನಿರತರಾಗಿರೋವಾಗ ಬಳಲಿ ಬೆಂಡೆದ್ದಿದ್ದ ವೀರರನ್ನೇಕೆ ದೇಶದ ನಾಯಕನೆಂದೆನಿಸಿಕೊಂಡವರು ಸೂಕ್ತವಾಗಿ ವಿಚಾರಿಸಿಕೊಳ್ಳಲಿಲ್ಲ? ಆ ವೀರರೆಂಥಾ ದುರಾದೃಷ್ಟವಂತರಿದ್ದಾರು? ದೇಶದ ಆ ವೀರ ಮಕ್ಕಳಿಗೆ ಈ 'ಚಾಚಾ' ಎಂಥಾ ದೈನೇಸಿ ಸ್ಥಿತಿ ತಂದಿದ್ದ? ಅವತ್ತು ನಮ್ಮ ಸೈನ್ಯವನ್ನ ಸದೆ ಬಡಿದದ್ದು ಶತ್ರುವಲ್ಲ, ಭಯಾನಕ ಹವಾಮಾನವೂ ಅಲ್ಲ...ನಮ್ಮ ದೇಶದ ನಿರ್ಲಕ್ಷ್ಯ ಕೊಂದಿತ್ತು ನಮ್ಮ ಸೈನಿಕರನ್ನ.

ಇದೇ ಸಂಧರ್ಭದಲ್ಲಿ ಇನ್ನೊಂದು ವಿಷಯ ನೆನಪಿಗೆ ಬಂತು. ಎರಡು ವರ್ಷಗಳ ಹಿಂದೆ ಕುಟುಂಬದೊಡನೆ ವಿಕ್ಟೋರಿಯಾ ದಲ್ಲಿರುವ ಹಿಮಾಚ್ಛಾದಿತ ಪರ್ವತವಾದ 'ಮೌಂಟ್ ಹೋಥಮ್' ಗೆ ಹೋಗಿದ್ದೆ. ಅಲ್ಲಿ ಬೀಳುವದು ಹಿತಕರವಾದ ಮಂಜು. ನಮಗೆಲ್ಲ ಮಂಜು ಬೀಳುವದನ್ನ ಜೀವನದಲ್ಲೇ ಮೊದಲ ಸಲ ನೋಡುವ ಅನುಭವ. ಅಲ್ಲಿ ನನ್ನ ಮಗಳು, ಅಪ್ಪಾ 'ಚಳಿ' ಅಂದಿದ್ದಷ್ಟೇ ತಡ ನಾನು ಅವಳಿಗೆ ಉಣ್ಣೆಯ ಬಟ್ಟೆ ಬರೆ, ಟೊಪ್ಪಿಗೆಗಳನ್ನ ಹಾಕಿ ಮೇಲೆ ಮಂಜಿನ ಜಾಕೀಟು ತೊಡಿಸಿ, ಮಂಜಿನಲ್ಲಿ ನಡೆದಾಡಲು ಬೇಕಾದ ವಿಶೇಷ ಪಾದರಕ್ಷೆಗಳನ್ನು ತೊಡಿಸಿ ನೋಡಿಕೊಂಡಿದ್ದೆ. 'ಮೌಂಟ್ ಹೋಥಮ್' ನಲ್ಲಿ ಬೀಳುವ ಆಹ್ಲಾದಕರ ಮಂಜು, ಹಿಮಾಲಯದ ಯುದ್ಧ ಸ್ಥಳದಲ್ಲಿ ಬೀಳುವ ಮಾರಣಾಂತಿಕ ಹಿಮಕ್ಕೆ ಹೋಲಿಸಿದರೆ ಏನೇನೂ ಅಲ್ಲ. ಆದರೆ ನಾನು 'ಪ್ರೀತಿಯ' ಮಗಳು ಅಂತ ಕಳವಳಕ್ಕೊಳಪಟ್ಟು ಬೇಕಾದ್ದೆಲ್ಲವನ್ನೂ ಮಾಡಿದೆ. ನಾವುಗಳು ನಮ್ಮ ಪ್ರೀತಿ ಪಾತ್ರರ ಸಾಮಾನ್ಯ ಆಟ-ಪಾಟದ ಬಗ್ಗೆ ಇಷ್ಟೊಂದು ಕಾಳಜಿ ತೆಗೆದುಕೊಳ್ಳುತ್ತೇವೆ, ಆದೇ, ನಮ್ಮ ದೇಶದ ಯೋಧರು ಅಂಥಾ ಕ್ಲಿಷ್ಟ ಪರಿಸ್ಥಿತಿಯಲ್ಲಿ ಗಡಿ ಕಾಯುತ್ತಿರಬೇಕಾದರೆ ಜವಾಬ್ದಾರಿಯುತ ಸ್ಥಾನದಲ್ಲಿದ್ದವರು ಅವರ ಕಾಳಜಿ ತೆಗೆದುಕೊಳ್ಳಲಿಲ್ಲವೇಕೆ?

ತನ್ನ ಗುಂಡಿಗೆಯಲ್ಲಿ ಗುಂಡಿಟ್ಟುಕೊಂಡು ನಮ್ಮ ಗುಡಿ ಗುಂಡಾರಗಳನ್ನ ಕಾಯ್ದ ಸೈನಿಕನಿಗೂ ತಂದೆ-ತಾಯಿ, ಹೆಂಡತಿ-ಮಕ್ಕಳು ಎಲ್ಲ ಇರುತ್ತಾರೆ. ಅವರ ಬಗ್ಗೆ ನಾವು ಯೋಚಿಸುತ್ತೆವಾ? ಸೈನಿಕನ ತ್ಯಾಗಕ್ಕೆ ಪ್ರತಿಯಾಗಿ ನಾವು ಮಾಡುವುದೇನು? ಎಲ್ಲಾ ಮುಗಿದ ಮೇಲೆ ಒಂದು ತಲೆಕೆಳಗಾಗಿ ನಿಂತ ಬಂದೂಕು ಅದರ ಮೇಲೊಂದು ಟೊಪ್ಪಿಗೆ ಹಾಕಿ ಕೈ ತೊಳೆದುಕೊಂಡು ಬಿಟ್ಟರಾಯಿತೇ?......ತಪ್ಪಲ್ಲವಾ?

ಬೆನ್ನು ಹುರಿಯಾಳದಿಂದ ಹಿರಿ ಹಿರಿದು ಬರುತ್ತಿದ್ದ ನನ್ನ ಬೆನ್ನು ನೋವು ಏನೇನೂ ಅಲ್ಲ ಅಂತ ಅನ್ನಿಸಿತು. ಬೆನ್ನು ಮೂಳೆಯನ್ನು ಹೊಕ್ಕ ಪ್ರಳಯಾಂತಕ ಚಳಿಯನ್ನೇ ಲೆಕ್ಕಿಸದೇ ಹೋರಾಡಿ ಮಡಿದವರ ಯಾತನೆಯ ಮುಂದೆ ನನ್ನದೂ ಒಂದು ನೋವೇ? ೧೯೬೨ರ ಭಾರತ ಚೀನಾ ಯುದ್ಧದಲ್ಲಿ ನಮ್ಮ ಭವಿಷ್ಯಕ್ಕಾಗಿ ತಮ್ಮ ವರ್ತಮಾನವನ್ನೇ ಧಾರೆ ಎರೆದ ವೀರ ಸೈನಿಕರಿಗೆ ನನ್ನದೊಂದು (ತಡವಾದರೂ) ಪ್ರಾಮಾಣಿಕ ಶ್ರಧ್ಧಾಂಜಲಿ.

ದೇಶ ಕಾಯುವಂಥಾ ಮಹತ್ತರ ಕೆಲಸದಲ್ಲಿ, ಸರಿಯಾದ ಸವಲತ್ತುಗಳಿಲ್ಲದೆ ಕೊನೆ ಎದುರಿರುವಾಗ ಸೈನಿಕನ ಮನದಾಳದಲ್ಲಿ ನಡೆದಿರಬಹುದಾಗಿದ್ದ ತುಮುಲಗಳನ್ನ ಕಲ್ಪಿಸಿಕೊಂಡೆ, ಅಸಹಾಯವಾಗಿ ನೆತ್ತರು ಕಕ್ಕಿ ಸತ್ತ ಆ ಬಡ ಸಿಪಾಯಿಗಳ ನೆರವಿಗೆ ಯಾರೂ ಬರದೇ ಇರುವ ಸನ್ನಿವೇಶ ಕಲ್ಪಿಸಿಕೊಂಡೆ, ಧರೆಯ ಮಾನವುಳಿಸಲು ಹೋರಾಡುತ್ತಾ ಧರಾಶಾಯಿ ಯಾಗುತ್ತಿರಬೇಕಾದರೆ ಸೈನಿಕನ ಬಾಯಿಂದ ಅಪ್ರಯತ್ನಪೂರ್ವಕವಾಗಿ ಹೊರಟಿರಬಹುದಾದ 'ಜೈ ಹಿಂದ್' ಊಹಿಸಿಕೊಂಡೆ...

ಕಣ್ಣು ಮಂಜಾಗದೆ ಇರುತ್ತವಾ? ▪

## ಪದ-ಪುಂಜ (ಶಾನೆ ತಲೆ ಕೆಡಿಸ್ಕೊಬೇಡಿ)

| | | |
|---|---|---|
| ಶಿ | ರು | ನ |
| ದ | ವ | ಲಾ |
| ಮಾ | ಯು | ಗ |

**ಏನ್ ರೂಲ್ಸು ?**

ಮೇಲಿನ ಒಂಭತ್ತು ಅಕ್ಷರಗಳನ್ನು ಉಪಯೋಗಿಸಿ 2 ರಿಂದ 9 ಅಕ್ಷರಗಳಿರುವ ಪದಗಳನ್ನು ರಚಿಸಿ.

- ಮೂರಕ್ಕಿಂತ ಹೆಚ್ಚಿನ ಅಕ್ಷರ ಇರುವ ಪದಗಳು ಸಂಯುಕ್ತ ಪದಗಳಿರಬಹುದು
- ಮಧ್ಯದ ಅಕ್ಷರ "ವ" ವನ್ನು ಒಳಗೊಂಡ ಕನಿಷ್ಟ 10 ಪದಗಳು ಇರಲೇಬೇಕು.
- ಒಂದು ಅಕ್ಷರವನ್ನು ಒಂದು ಪದದಲ್ಲಿ ಒಂದೇ ಸಲ ಬಳಸಬೇಕು
- 10 ಸಾಧಾರಣ, 15 ಉತ್ತಮ, 20+ ಅತ್ಯುತ್ತಮ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com) 20 ಕ್ಕೂ ಹೆಚ್ಚು ಪದಗಳನ್ನು ರಚಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**ಅಕ್ಟೋಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.**

## ಆಗಸ್ಟ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ೨೦ಕ್ಕೂ ಹೆಚ್ಚು ಪದಗಳನ್ನ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಶುಭಶ್ರಿ, ಸಿಡ್ನಿ
- ಸುಮಾ ಅಶೋಕ್, ಸಿಡ್ನಿ
- ಗೀತಾ ಪ್ರಸಾದ್, ಅಡಿಲೈಡ್
- ಸ್ಮಿತಾ ಮೇಲ್ಕೋಟೆ, ಸಿಡ್ನಿ
- ನಳಿನಾ ವೆಂಕಟನಾಗ್, ಮೆಲ್ಬೋರ್ನ್

ಸೆಪ್ಟೆಂಬರ್ ತಿಂಗಳ ಪದಪುಂಜ

| | | |
|---|---|---|
| ನ | ಜ | ಗ |
| ರು | ಕ | ಸಂ |
| ತಿ | ಡ | ನಾ |

**ಮೂಡಬಹುದಾದ ಹಲವು ಪದಗಳು:**

ಕರು, ಕನರು, ಕತಿ, ಕಡ, ಕಡಗ, ಕಡಜ, ರುತಿ, ನಾಕ, ನಾಗ, ನಾರು, ಜನ, ಜನಕ, ಜನಾನ, ಜತಿ, ನರು, ನಗಜ, ನಜರು, ನಡ, ನಡಕ, ನತಿ, ಸಂಕ, ಸಂಗತಿ, ಸಂಜ, ತಿರು, ತಿರುಕ, ಸಂಗ, ಗತಿ, ಗರುಡ,

ಗಜ, ಗಡ, ಜಡ, ನಗ

**ಕರುನಾಡಜನಸಂಗತಿ**

NRI SEVA
Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL
0401193852

## ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ, ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

### ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!




ರಚನೆ: ಶ್ರೀಮತಿ ವಿಜಯಶ್ರೀ ಅರವಿಂದ್




ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ನನ್ನ ಅನುಭವದಲ್ಲಿ, ಇಲ್ಲಿ ನಮ್ಮ ಯಾವುದೇ ಪಾರ್ಟಿಯಲ್ಲಿ ನಾವು ಸೇರಿದಾಗ ಮಾತನಾಡುವುದು ಕ್ರಿಕೆಟ್, ಸ್ವಲ್ಪ ಇಂಡಿಯನ್ ಪಾಲಿಟಿಕ್ಸ್ ಮತ್ತೆ ಸಿನಿಮಾ, ಇವುಗಳು ಗ್ಯಾರಂಟಿಯಾಗಿ ಇದ್ದೇ ಇರುತ್ತದೆ.

ನಮ್ಮ ದೇಶದಲ್ಲಿ ಕ್ರಿಕೆಟ್ ಗೊತ್ತಿಲ್ಲದವರು ಬಹಳ ಕಮ್ಮಿ ಅನ್ನಿ ಆದ್ದರಿಂದಲೇ ನಮ್ಮ cricket ಆಟಗಾರಮೇಲೆ ಬೇರೆ ದೇಶಹೇದ ಆಟಾಗಾರರಿಗಿಂತಾ ತುಂಬಾ ಒತ್ತಡ. ವೆಂಗ್ಸರ್ಕಾರ್ ಸೆಲೆಕ್ಷನ್ ಕಮಿಟಿ ಚೇರ್ಮನ್ ಆಗಿದ್ದಾಗ ಹೇಳಿದಮಾತು, "ಪಾನ್ ಬೀಡಾ ಶಾಪ್ ನಿಂದ ಇಡಿದು ಪಾರ್ಲಿಮೆಂಟ್ ವರೆಗೂ ಸೆಲೆಕ್ಷನ್ ಬಗ್ಗೆ ಡಿಸ್ಕಸ್ ಮಾಡ್ತಾರೆ ಅಂತ" ಮತ್ತೆ ಎಷ್ಟೋಜನ "as if cricket is played in 15" TV " ಅಂತ. ಮತ್ತು "ಎಷ್ಟೋ ಜನ ಜೀವನದಲ್ಲೇ ಕ್ರಿಕೆಟ್ ಬಾಲ್ ಮುಟ್ಟಿರದವರು in swing – out swing ಬಗ್ಗೆ ಮಾತಾಡ್ತಾರೆ ಅಂತ". ಅವನು ಹೇಳಿದ್ದು ಸರಿ ಅನ್ನಿಸುತ್ತೆ, ಅದ್ದರಿಂದ ಆಟಗಾರರು ಮೇಲೆ ಆಯ್ಕೆದಾರ ಮೇಲೆ ಒತ್ತಡ ತುಂಬಾ ಜಾಸ್ತಿನೇ.

ನನಗೆ ತಿಳಿದ ಹಾಗೆ ಆಸ್ಟ್ರೇಲಿಯಾ ಕ್ರಿಕೆಟ್ ಆಟಗಾರರು ಬರೆದಿರುವಷ್ಟು ಪುಸ್ತಕಗಳು ಯಾರೂ ಬರೆದಿಲ್ಲ ಅಂತ ಅನ್ನಿಸುತ್ತೆ. ಉದಾಹರೆಣೆಗೆ, ರಿಕ್ಕಿ ಪಾಂಟಿಂಗ್ ನೋಡಿ ಸುಮಾರು ಮೂರುನಾಲ್ಕೂ ಪುಸ್ತಕ ಬರೆದಿರಬೇಕು, ಇಂಗ್ಲೆಂಡ್ಗೆ ಹೋಗಿದ್ದಕ್ಕೊಂದು , ಅಲ್ಲಿಂದ ಬಂದ್ದಿದ್ದಕ್ಕೊಂದು ಬರೆದಿದ್ದಾನೆ, ಸ್ಟೀವ್ ವಾ ಬರೆದಿರುವ ಪುಸ್ತಕದ ದಪ್ಪ ನೋಡಿದ್ರೆ ಓದುವುದಕ್ಕೆ ಹೆದರಿಕೆ ಹಾಗುತ್ತೆ,( ಕ್ಷಮಿಸಿ ಈ ಪುಸ್ತಕಗಳು ಚೆನ್ನಾಗಿರಬಹುದು, ನಾನು ಓದಿಲ್ಲ ). ಆದರೆ ನಮ್ಮ ಭಾರತದವರು ಬರೀ ಬೆರಳು ಎಣಿಸುವಷ್ಟು ಪುಸ್ತಕ ಬರೆದಿದ್ದಾರೆ. ನನಗೆ ಕ್ರಿಕೆಟ್ ಆಟಗಾರರ ಪುಸ್ತಕ ಓದುವುದು ಇಷ್ಟ, ಆದರೆ ಇಷ್ಟೊಂದು ಪುಸ್ತಕ ಅಂದರೆ ಕಷ್ಟ ಅನ್ನಿ.

ಪ್ರಸ್ಸನ ರವರ ಆತ್ಮ ಚರಿತ್ರೆ "One more over"ಲ್ಲಿ, ಪ್ರಸನ್ನ ಟೆಸ್ಟ್ ಗೆ ಸೆಲೆಕ್ಟ್ ಹಾಗಿ, ಟೆಸ್ಟ್ಆಡಿ, ನಂತರ ಎರಡು ಮೂರು ವರ್ಷ ಕ್ರಿಕೆಟ್ ಆಡಲಿಲ್ಲವಂತೆ, ಕಾರಣ ಇಂಜಿನಿಯರಿಂಗ್ ಓದುವುದು ಮುಖ್ಯವಾಗಿತ್ತಂತೆ, ಮತ್ತೆ ಅವರ ಪುಸ್ತಕದಲ್ಲಿ ಇನ್ನೊಂದು ಪ್ರಸ್ತಾಪವಿದೆ, ಅವರ ಸ್ನೇಹಿತ ವಿಶ್ವನಾಥ್ ಅಂತ (G R ವಿಶ್ವನಾಥ್ ಅಲ್ಲ) Leg spinner ಅವನು ದಕ್ಷಿಣವಲಯ ಮತ್ತು ಪ್ರವಾಸಿ ಇಂಗ್ಲೆಡ್ ವಿರುದ್ಧದ ಪಂದ್ಯದಲ್ಲಿ ೭ ವಿಕೆಟ್ ಪಡೆದು, ನಂತರ test matchಗೆ ಸೆಲೆಕ್ಟ್ ಆಗಿದ್ದನ್ನು ಬಿಟ್ಟು, ಟೆಸ್ಟ್ cricket ಆಡದೆ ಓದುವುದನ್ನು ಮುಂದುವರಿಸುವುದನ್ನು ಹೇಳುತ್ತಾರೆ, ನಂತರ ವಿಶ್ವನಾಥ್ ಕ್ರಿಕೆಟ್ ಅಡಿಲ್ಲ, ಆಗ ಕ್ರಿಕೆಟ್ ನಲ್ಲಿ ಅಷ್ಟು ದುಡ್ಡಿರಲಿಲ್ಲ ಅಲ್ವ!.

15-16 ವರ್ಷಕ್ಕೆ National, Inter National level ನಲ್ಲಿ ಯಾವುದೇ ಸ್ಪೋರ್ಟ್ಸ್ ನಲ್ಲಿ represent ಮಾಡುವುದು ಬಹಳ ಅಶ್ಚರ್ಯದ ಸಂಗತಿ, ಮತ್ತು ದೊಡ್ಡ ಸಾಧ,ನೇನೆ. ಉದಾಹರಣೆಗೆ, ಪ್ರಕಾಶ್ ಪಡೋಕೊನೆ, ಒಂದೇ ವರ್ಷದಲ್ಲಿ under 15 National champion ಅದೇ ವರ್ಷ senior national champion ಕೂಡ!




ಬಹಳ ದಿನಗಳ ಹಿಂದೆ ನಾನು ಒಂದು ಪುಸ್ತಕ ಓದಿದೆ ಅದು ಸಚಿನ್ ತೆಂಡೂಲ್ಕರ್ ಬಗ್ಗೆ ಬರೆದಿರುವ Biography, ಬರೆದಿರುವವರು ವೈಭವ್ ಪುರಂದರ, ಪುಸ್ತಕದ ಹೆಸರು "A Definitive biography" foreword by Ramchandra Guha . ಯಾವುದೇ Biography ನಲ್ಲಿ ಅ ವ್ಯಕ್ತಿಯ ವಿಷಯಕ್ಕಿಂತ ಆ ಸಮಯ, ಪರಿಸರ ಮತ್ತು ನಾವು ಕೇಳಿರದ ವಿಷಯಯದ ಬಗ್ಗೆ ನನಗೆ ಆಸಕ್ತಿ. ನಾನು ಈ ಪುಸ್ತಕದಲ್ಲಿ ಅದನ್ನು ಹುಡುಕುತಿದ್ದೆ. ಪುಸ್ತಕದಲ್ಲಿ ಇದ್ದ ಕೆಲವು ಸಂಗತಿಗಳು ಇಲ್ಲಿ ಬರೆಯುತ್ತಿದ್ದೇನೆ.

ಸಚಿನ್ ಟೆಸ್ಟ್ ಆಡಿದ್ದು ೧೫-೧೬ ವರ್ಷದವನಿದ್ದಾಗ. ಸಚಿನ್ ಅಂತ ಹೆಸರು ಬಂದದ್ದು ಅವರ ತಂದೆಗೆ ಹೆಸರಾಂತ ಸಂಗೀತ ನಿರ್ದೇಶಕ ಸಚಿನ್ ದೇವ್ ಬರ್ಮನ್ ಇಷ್ಟವಂತೆ. ಸಚಿನ್ ತೆಂಡೂಲ್ಕರ್, ಅವರ ತಂದೆಯ ಎರಡನೇ ಪತ್ನಿಯಾ ಒಬ್ಬನೇ ಮಗ. ಅವರ ತಂದೆ ರಮೇಶ್ ತೆಂಡೂಲ್ಕರ್ ಅವರ ಮೊದಲನೇ ಪತ್ನಿ ತೀರಿಕೊಂಡ ನಂತರ ಅವರು ಮೊದಲನೇ ಪತ್ನಿಯ ಸಹೋದರಿ, ರಜನಿಯನ್ನು ಮದುವೆಯಾದರು. ಮೊದಲ ಹೆಂಡತಿಗೆ ಮೂರು ಮಕ್ಕಳು ಅಜಿತ್, ನವೀನ್, ಮತ್ತು ಸವಿತಾ . ಸಚಿನ್ ಅವರ ತಾಯಿ, ರಜನಿ life Insurance company ಯಲ್ಲಿ ಕೆಲಸ ಮಾಡಿದವರು , ತಂದೆ ಕಾಲೇಜ್ ನಲ್ಲಿ ಮರಾಠಿ ಪ್ರೊಫೆಸರ್. ಸಚಿನ್ cricket ಕೋಚ್ ರಮಾಕಾಂತ ಅಚೆರೆಕರ್, ಅವರ ಅತ್ತಿರ ಸಚಿನ್ ನನ್ನು ಕರೆದುಕೊಂಡುಹೋಗಿ ಬಿಟ್ಟಿದ್ದು ಅವರ ಅಣ್ಣ ಅಜಿತ್ ತೆಂಡೂಲ್ಕರ್, ಆಗ ಸಚಿನ್ ಗೆ ಕೇವಲ ೧೦ ವರ್ಷ, ಅವರ ಅಣ್ಣ ಅಜಿತ್ ಮತ್ತು ಸಚಿನ್ ಗೆ ೧೦ ವರ್ಷ ವ್ಯತ್ಯಾಸವಂತೆ. ಸಚಿನ್ ಬಾಲ್ಯದಲ್ಲಿ ಟೆನಿಸ್ ಬಹಳ ಇಷ್ಟವಂತೆ, ಜಾನ್ ಮೆಕನ್ರೋ ಅಚ್ಚುಮೆಚ್ಚಿನ ಆಟಗಾರ, ಚಿಕ್ಕ ಹುಡುಗನಾಗಿದ್ದಾಗ ಅವನ ರೀತಿ ಸಚಿನ್ ಕೂಡಾ ತಲೆಗೆ ಪಟ್ಟಿ ಕೊಳ್ಳುತಿದ್ದನಂತೆ. ಸಚಿನ್ ೮೯-೯೦ ರಲ್ಲಿ ಟೆಸ್ಟ್ ಆಡಿದ್ದು ಅವರನ್ನು ಸೆಲೆಕ್ಟ್ ಮಾಡಿದ selectors ಮಾತು, ಸೆಲೆಕ್ಟಿಂಗ್ ಕಮಿಟಿಯಲ್ಲಿ ಇದ್ದವರು ನಮ್ಮ ಕರ್ನಾಟಕದ ಜಿ. ಆರ್. ವಿಶ್ವನಾಥ್, ರಮೇಶ್ ಸೆಕ್ಸೇನಾ, ನಾರಿಮನ್ ತಮನೆ,ಆಕಾಶ್ ಲಾಲ್ ಮತ್ತು ರಾಜಸಿಂಗ್ ದೂಂಗರ್ಪುರ್.

ಸಚಿನ್ ಪ್ರತಿಭೆ ಬಗ್ಗೆ ಎಲ್ಲರಿಗೂ ನಂಬಿಕೆ, ಆದರೆ ಅವರಿಗೆಲ್ಲಾ ಅನ್ನಿಸಿದ್ದು ಇಷ್ಟು ಚಿಕ್ಕವಯಸ್ಸಿನಲ್ಲಿ ಏನಾದರು fail ಆದರೆ, ಅವನ cricketing ಕೇರಿಯರ್ ಹಾಳಾಗಬಹುದು ಎನ್ನುವ ಭಯ. ನಾರಿಮನ್ ತಮನೆ (ವಿಕೆಟ್ ಕೀಪರ್ ೫೦-೬೦ ದಶಕದಲ್ಲಿ) meeting ನಲ್ಲಿ ಸಚಿನ್ ಸೆಲೆಕ್ಷನ್ ಬಗ್ಗೆ ಹೇಳಿದ್ದು ಹೀಗೆ, " Sachin selection is our future investment for Indian cricket and Sachin never fails and Sachin is another name for success". ಸಚ್ಚಿನ್ ಹೆಂಡತಿ ಗೀತಾಂಜಾಲಿ ಮೆಹತ Anglo Indian, ಮೊದಲು ಭೇಟಿಯಾಗಿದ್ದು ೯೦ ರಲ್ಲಿ ಮದುವೆಯದ್ದದು ೯೫ ರಲ್ಲಿ, ಗೀತಾಂಜಾಲಿಯ ತಂದೆ ತುಂಬಾ ದೊಡ್ಡ ಬಿಸಿನೆಸ್ ಮ್ಯಾನ್, ತಾಯಿ ಆನಬೇಲ ಮೆಹತ ಇಂಗ್ಲೆಂಡ್ ನವರು. ಗೀತಾಂಜಾಲಿ ವೈದ್ಯೆ, ಮಕ್ಕಳ ತಜ್ಞೆ. ಸಚಿನ್ ನ ಮೊದಲು commercial advertising ಮಾಡಿದ್ದು ಗಾಯಕಿ ಆಶಾಬೋಸ್ಲೆ ಅಳಿಯ ಹೇಮಂತ್ ಕೇರಕರ, (ಇತ್ತೀಚೆಗೆ ಅತ್ಮಹತ್ಯೆ ಮಾಡಿಕೊಂಡ ನಿಧನರಾದ ವರ್ಷ, ಅಶಾಬೋಸ್ಲಲೇ ಮಗಳ ಪತಿ ) ಅವರ ಕಂಪನಿಗೆ ಅದು ಫ್ರೀಯಾಗಿ ಮಾಡಿದ್ದಂತೆ .

ಎಲ್ಲರಿಗೂ ತಿಳಿದಿರುವ ಹಾಗೆ Michael Schumacher, great formula one world champion, ಸಚಿನ್ ಗೆ ೨೦೦೨ -೩ ರಲ್ಲಿ ಫೆರಾರಿ ಕಾರನ್ನು ಪ್ರೆಸೆಂಟ್ ಮಾಡಿದ್ದ, ಅದಕ್ಕೆ ಸಚಿನ್ national players ಗೆ ಸರ್ಕಾರದ ಈಗಿರುವ tax exemption ಕೇಳಿದ್ದರು, ಅದು ಸುಮಾರು ೧೩ ಲಕ್ಷ ವಂತೆ, ಸರ್ಕಾರ ೧೩ ಲಕ್ಷ, ಟ್ಯಾಕ್ಸ್ ನ್ನಾಮಾಡಿತ್ತು. ನಂತರ ಮಾಧ್ಯಮ ಗಳಲ್ಲಿ controversy ಬಗ್ಗೆಯೂ ಈ ಪುಸ್ತಕದಲ್ಲಿ ಬರೆದಿಲ್ಲ ಮತ್ತು ಪಾಕಿಸ್ತಾನದಲ್ಲಿ ಟೆಸ್ಟ್ ಮ್ಯಾಚ್ ನಲ್ಲಿ ದ್ರಾವಿಡ್, ಸಚಿನ್ ಡಬಲ್ ಸೆಂಚುರಿ ಹತ್ತಿರದ ಸಮಯದಲ್ಲಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿದ controversy ಬಗ್ಗೆ ಹೆಚ್ಚೇನೂ ಬರೆದಿಲ್ಲ. ದಕ್ಷಿಣ ಆಫ್ರಿಕಾ ನಡೆದಲ್ಲಿ ನೆಡದ ಬಾಲ್ ಟೆಂಪೆರಿಂಗ್ ಬಗ್ಗೆ ಬಹಳಷ್ಟು ವಿಷಯ ಇದೆ.

ಅದರೆ ಯಾವುದೇ controversy ಗಳ ಬಗ್ಗೆ ಬರೆದಿಲ್ಲ, ಒಟ್ಟಿನಲ್ಲಿ ಪುಸ್ತಕದಲ್ಲಿ ಬರೀ ಅಂಕಿ ಅಂಶಾನೇ ಜಾಸ್ತಿ ಅನ್ನಿಸುತು. ನನ್ನ ಮಟ್ಟಿಗೆ ಈ ಪುಸ್ತಕ ಇನ್ನೂ ಚೆನ್ನಾಗಿ ಮೂಡಿಬರಬಹುದಿತ್ತು.▪

# ಸಿಡ್ನಿಯ ಲಿವರ್ಪೂಲ್ ನಲ್ಲಿ ನಡೆದ ಗಣೇಶೋತ್ಸವದ ಛಾಯಾಚಿತ್ರಗಳು
















**ಜಾಣ ಕರ್ನಾಟಕ – ಉತ್ತರ**

೧. ಕಾವೇರಿ ಮತ್ತು ಕಪಿಲಾ

೨ ಕೃಷ್ಣಾ ಮತ್ತು ಮಲಪ್ರಭಾ

# ರಾಗಿ ಬೀಸುವನೆ ರಾಜ?

## ಆಸ್ಟ್ರೇಲಿಯ ಚುನಾವಣಾ ವಿಶ್ಲೇಷಣೆ



ಲೇಖನ: ಏನ್. ಸುದರ್ಶನ್

"ಯಾವ ರಾಜ ಬಂದರೂ ರಾಗಿ ಬೀಸೋದು ತಪ್ಪಲ್ಲ". ಪ್ರಜಾಪ್ರಭುತ್ವಕ್ಕೇ ಮಾರಕವಾದ ಈ ಉದ್ಗಾರ ಈಗಲೂ ಉಳಿದುಕೊಂಡಿರುವುದು ಶೋಚನೀಯ. ನಾವೆಷ್ಟೇ ರಾಜಕೀಯಾತೀತ (apolitical) ನಿಲುವಿನವರಾದರೂ, ರಾಜಕೀಯದ ನೆರಳು ನಮ್ಮೆಲ್ಲ ಬದುಕು, ಕನಸು ಹಾಗು ಆಶಯಗಳ ಮೇಲೆ ಹರಡಿಕೊಂಡಿರುವುದು ಸುಳ್ಳಲ್ಲ. ನಾವು ಬದುಕಲು ಆರಿಸಿಕೊಂಡ ದೇಶದ ರಾಜಕೀಯ ನಮ್ಮ ಮೇಲೆ ಪರಿಣಾಮ ಬೀರದೇ ಇರುವುದಿಲ್ಲ.

ಇತ್ತೀಚೆಗಷ್ಟೆ ಆಸ್ಟ್ರೇಲಿಯಾದ ಕೇಂದ್ರ ಸರಕಾರಕ್ಕೆ ನಡೆದ ಚುನಾವಣೆಯಲ್ಲಿ ಆಳುತ್ತಿದ್ದ ಪಕ್ಷಕ್ಕೆ ತೀವ್ರ ಸೋಲಾಗಿರುವುದು ಅರ್ಧ ಕತೆ ಮಾತ್ರ.

ಎರಡೂ ಪಕ್ಷಗಳ ನೀತಿಕಟ್ಟು (policy) ಹಲವು ಸಂಗತಿಗಳಲ್ಲಿ ಸರಿಸುಮಾರು ಒಂದೇ ಆಗಿದ್ದರೂ ಕೂಡ, ವಿರೋಧಿ ನಾಯಕ ಟೋನಿ ಅಬಟ್ಟನ ಚುನಾವಣೆಯ ಪ್ರಣಾಳಿಕೆಗೆ ಜನ ಮನಸೋತಿದ್ದು ಉಳಿದರ್ಧ ಕತೆ.

ಹಿಂದಿನ 2010ರ ಚುನಾವಣೆಯಲ್ಲಿ ಇಲ್ಲಿಯ ಎರಡು ಮುಖ್ಯ ಪಕ್ಷಗಳಾದ ಲೇಬರ್(ALP) ಹಾಗು ಲಿಬರಲ್-ನ್ಯಾಷನಲ್ ಸಂಯುಕ್ತ (LNP) ಪಕ್ಷಗಳು ತಲಾ 72 ಸೀಟುಗಳನ್ನು ಗೆದ್ದು, ಗ್ರೀನ್ಸ್ ಹಾಗು ಪಕ್ಷೇತರರ ಬೆಂಬಲದಿಂದ ALP ಅಧಿಕಾರಕ್ಕೆ ಬಂದಿತ್ತು. ಅಲಗಿನ ಮೇಲೆ ನಡೆವಂತಹ ರಾಜಕೀಯ ಕುಶಲಗಾರಿಕೆಯಿಂದ ಎರಡನೇ ಅವಧಿಯ ಮೂರು ವರ್ಷ ಸರ್ಕಾರವನ್ನು ನಡೆಸಿದ್ದು ಆಸ್ಟ್ರೇಲಿಯಾದ ಮೊಟ್ಟ ಮೊದಲ ಮಹಿಳಾ ಪ್ರಧಾನಿ ಜ್ಯೂಲಿಯಾ ಗಿಲಾರ್ಡ್.

ಈಗ 2013ರ ಚುನಾವಣೆಯಲ್ಲಿ ಸಂಪ್ರದಾಯವಾದೀ (conservative) LNP 90 ಸೀಟುಗಳನ್ನು ಗೆದ್ದು 55 ಸೀಟಷ್ಟೇ ಗೆದ್ದ ಪ್ರಗತಿಪರ ALPಯಿಂದ ಅಧಿಕಾರ ಕಸಿದುಕೊಂಡಿದೆ. ALP ಸೋಲುವ ಸಂಗತಿ ಆರು ತಿಂಗಳ ಮುಂಚೆಯೇ ಸರ್ವೇಗಳ ಮೂಲಕ ಖಾತ್ರಿಯಾಗಿತ್ತು. ಅದರಂತೆ ALPಗೆ 46% ಹಾಗು LNPಗೆ 54% ಮತಗಳು ದಕ್ಕಿದೆ. ಇದು ಆಸ್ಟ್ರೇಲಿಯಾದಲ್ಲಿ ಚಾಲತಿಯಲ್ಲಿರುವ "ಆದ್ಯತೆ ಆಧಾರಿತ" (Preferential Voting) ಮತ ಚಲಾವಣೆಯಲ್ಲಿ ಎರಡು ಮುಖ್ಯ ಪಕ್ಷಗಳಿಗೆ ಹಂಚಿಕೆಯಾದ ಮತಗಳ ಅನುಪಾತ.





ಆಸ್ಟ್ರೇಲಿಯಾದ ಇತ್ತೀಚಿನ ರಾಜಕೀಯ ಇತಿಹಾಸದಲ್ಲಿ ಮೂರು ವರ್ಷ ಮುಗಿಸಿದ ಮೊದಲ ಅವಧಿಗೆ ಮತದಾರ ಸರ್ಕಾರವನ್ನು ಇಳಿಸಿದ ದಾಖಲೆಯಿಲ್ಲ. ಹಾಗೆಯೇ ಎರಡು ಅವಧಿ ಆಳಿ ಸರ್ಕಾರ ಉಳಿಸಿಕೊಳ್ಳುವುದೂ ಕಷ್ಟ. ಅತ್ತ ALPಯ ಒಳಜಗಳ ಹಾಗು ನಾಯಕ ಪಟ್ಟಕ್ಕೆ ನಡೆದ ಕಿತ್ತಾಟ ಜನರಲ್ಲಿ ಬೇಸರ ಹುಟ್ಟಿಸಿತ್ತು. ಹಲವಾರು ಪ್ರಗತಿಪರ ಕಾಯಿದೆಗಳನ್ನು ತಂದಿದ್ದರೂ ಅವಾವುದೂ ಜನರ ಮನಸ್ಸಿನಲ್ಲಿ ನಿಲ್ಲದೇ ಹೋಯಿತು. ಇತ್ತ ಒಂದು ಕಾಲದಲ್ಲಿ ಕ್ರಿಶ್ಚಿಯನ್ ಪಾದ್ರಿಯಾಗಲು ಹೊರಟಿದ್ದ ಪ್ರಧಾನಿ ಟೋನಿ ಅಬಟ್‌ನ ಸಂಪ್ರದಾಯವಾದೀ ಸರ್ಕಾರ ರೂಪುಗೊಂಡಿದೆ. ನನ್ನಂತಹ "ರಾಗಿ ಬೀಸುವ" ಹಲವರಲ್ಲಿ ಮುಂದಿನ ಮೂರು ವರ್ಷ ಹೇಗೆ ನಡೆಯುತ್ತದೆ ಎಂಬ ಕುತೂಹಲ ಹಾಗು ಕಾತರ ಹುಟ್ಟಿಕೊಂಡಿದೆ.▪

ಕ ನ್ನ ಡ

ತನು ಕನ್ನಡ ಮನ ಕನ್ನಡ

# ಕರ್ನಾಟಕ ಸಂಗೀತ

ಲೇಖಕರು: ಹರೀಶ್ . ಜಿ

- ಕರ್ನಾಟಕ ಮಣ್ಣಿನ ನಮ್ಮ ನೆಲದ ಸಂಗೀತವೇ ಕರ್ನಾಟಕ ಸಂಗೀತ
- 'ಕರ್ನಾಟಕ' ಸಂಗೀತ ಎನ್ನುವ ಬಳಕೆ ಸರಿ... 'ಕರ್ನಾಟಿಕ್' ಸಂಗೀತ ತಪ್ಪು ಹಾಗೂ ಅಪಭ್ರಂಶ. 'ಕರ್ನಾಟಿಕ್' ಎಂಬ ಪದ ಬಳಕೆಯಲ್ಲಿದ್ದರೂ ಅದರ ಮೂಲ ಕರ್ನಾಟಕವೇ ಆಗಿದೆ
- ಕರ್ನಾಟಕ ಸಂಗೀತದ ಮೂಲಪುರುಷರಾದ ಪುರಂದರದಾಸರು ಕನ್ನಡಿಗರು
- ನಾನ್ಯದೇವ, ಸೋಮೇಶ್ವರ ಚಕ್ರವರ್ತಿ, ಕಲ್ಲಿನಾಥ, ಪುಂಡರೀಕ ವಿಠ್ಠಲ, ಶಾರ್ಙ್ಗದೇವ ಇವರೆಲ್ಲ ಕನ್ನಡಿಗರು
- ಯಾವುದೇ ಕಛೇರಿಯಲ್ಲಿ ಮೊದಲು ಹೇಳುವ 'ವಾತಾಪಿ ಗಣಪತಿಂ ಭಜೇ...' ದ ವಾತಾಪಿ ನಮ್ಮ 'ಬಾದಾಮಿ' ಹಾಗೂ ಆ ಗಣಪತಿಯು ನಮ್ಮದೇ ಆಗಿದ್ದು, ೭ನೇ ಶತಮಾನದಲ್ಲಿ ಪಲ್ಲವರೊರೆ 'ಸಿರುತೊಂಡರನು' ಅದನ್ನು ತಮಿಳುನಾಡಿನ 'ತಿರುಚ್ಚೆಂಕಾಟ್ಟಂಕುಡಿ'ಗೆ ಒಯ್ದಿದ್ದನು
- ತಮಿಳಿನಲ್ಲಿ `ಕರ್ನಾಟಕ' ಪದಕ್ಕೆ ಸಂಪ್ರದಾಯ ಮತ್ತು ಶುದ್ಧ ಎಂಬರ್ಥಗಳೂ ಇವೆ

ಇಲ್ಲಿ ಪ್ರಕಟವಾಗುವ ವಿಷಯ ಜಾಹೀರಾತಷ್ಟೇ ಆಗಿರುತ್ತದೆ. ಪತ್ರಿಕೆಯ ಸಂಪಾದಕೀಯ ಸಮಿತಿಯ ಅನುಮೋದಿತ ವಿಷಯವಾಗಿರುವುದಿಲ್ಲ. ಮಾಹಿತಿಯ ಸತ್ಯಾಸತ್ಯತೆ ಓದುಗರ ವಿವೇಚನೆಗೆ ಬಿಟ್ಟಿದ್ದು

## ದಸರಾ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭ

### ಸಿಡ್ನಿ ಕನ್ನಡ ಶಾಲೆ ಆಶ್ರಯದಲ್ಲಿ, ಸುಗಮ ಗಾನ ಸಮಾಜ ಅರ್ಪಿಸುತ್ತಿದೆ “ಹಾಸ್ಯ ಸಂಜೆ”



WattleGrove Public School NSW 2173

**ದಿನಾಂಕ 09-11-2013 ಸಂಜೆ 5.30 ಕ್ಕೆ**

ಖ್ಯಾತ ಹಾಸ್ಯಗಾರ **ರಿಚರ್ಡ್ ಲೂಯಿಸ್** ಮತ್ತು ಸ್ಥಳೀಯರಿಂದ ಮನರಂಜನಾ ಕಾರ್ಯಕ್ರಮ.

ವಿವರಗಳು www.sugamakannada.com ನಲ್ಲಿ

## ಸಂಭ್ರಮದ ಹಬ್ಬಕ್ಕೆ ಸಾರ್ಥಕತೆಯ ಮೆರಗು (ದೀಪಾವಳಿ ಔತಣ ಕೂಟ)




ದೀಪಾವಳಿ ಎಂದರೆ ಬಿರುಸು ಬಾಣಗಳ,ಸವಿ ತಿನಿಸುಗಳ, ಹೊಸ ಬಟ್ಟೆಯ,ದೀಪಾಲಂಕಾರದ ಸಡಗರ- ಒಟ್ಟಿನಲ್ಲಿ, ಸಂಭ್ರಮದ, ಸಂತಸದ ಹಬ್ಬ.ಈ ಸಂಭ್ರಮದ ಹಬ್ಬಕ್ಕೆ ಸಾರ್ಥಕತೆಯ ಮೆರಗನ್ನೂ ತೊಡಿಸಿದರೆ ಹೇಗೆ? ಸಿಡ್ನಿಯ ಒಂದು ಪ್ರಗತಿಪರ ಸಂಸ್ಥೆ, ವಿಷನ್ ೨೦೨೦ಯ ಸದಸ್ಯರಿಗೆ ಈ ಓಚನೆ ಬಂದಾಗ ಶುರುವಾಯಿತು-ವಾರ್ಷಿಕ ದೀಪಾವಳಿಯ ಭೋಜನ ಕೂಟ(ಡಿನ್ನರ್).ಬೇರೆ ಭೋಜನ ಕೂಟಗಳಲ್ಲಿ ಇರುವಂತೆ ಇಲ್ಲೂ ಹಾಡು, ನೃತ್ಯ, ಮನರಂಜನೆ,ಸೊಗಸಾದ ಊಟ ಎಲ್ಲ ಇದೆ. ಆದರೆ ಈ ಡಿನ್ನರನಲ್ಲಿ ಬಂದ ಹಣ, ಕೊನೆಯ ಸೆನ್ಟ್ ಸಹ ಸೇರಿದಂತೆ, ಯಾವುದಾದರೂ ಒಂದು ಉಪಯುಕ್ತ ಯೋಜನೆಗೆ ಮುಡಿಪಾಗುತ್ತದೆ.

ಈಗಾಗಲೆ ದಾನ ಕಾರ್ಯ, ಸಮಾಜ ಸೇವೆ ಮಾಡುತ್ತಿರುವ ಹಲವಾರು ಸುಪ್ರಸಿದ್ಧ ಸಂಸ್ಥೆಗಳು ಇರುವಾಗ, ಇನ್ನೊಂದು ಸಂಸ್ಥೆ ಬೇಕಿತ್ತೆ? ಇದು ಹಲವರ ಮನಸಿನಲ್ಲಿ ಏಳಬಹುದಾದ ತರ್ಕಬದ್ಧ ಪ್ರಶ್ನೆ."ಆಡಳಿತಕ್ಕಾಗಿ,ಮೇಲಿನ ಖರ್ಚು ವೆಚ್ಚಗಳಿಗಾಗಿ,ಜಾಹೀರಾತಿಗಾಗಿ ನಾವು ಒಂದು ಪೈಸೆಯನ್ನೂ ವೆಚ್ಚ ಮಾಡುವುದಿಲ್ಲ, ನಮ್ಮ ಕೊಡುಗೆ ಅಷ್ಟೂ ಸಲ್ಲಬೇಕಾದ ಓಜನೆಗೆ ಸಲ್ಲುತ್ತದೆ ಎನ್ನುವ ತೃಪ್ತಿ ನಮ್ಮದು.ಕೆಲವು ಪ್ರಸಿದ್ಧ ಸಂಸ್ಥೆಗಳಲ್ಲಿ ನೀವು ಕೊಡುವ ಹಣದಲ್ಲಿ ೩೫% ಭಾಗ ಅವರ ಆಡಳಿತಕ್ಕಾಗಿ ವಿನಿಯೋಗವಾಗುತ್ತದೆ," ಎನ್ನುತ್ತಾರೆ ಸುಮಾರು ಹತ್ತು ವರ್ಷಗಳಿಂದ ಸಂಸ್ಥೆಯ ಸದಸ್ಯರಾಗಿರುವ ಹಿರಿಯ ವೈದ್ಯರೊಬ್ಬರು.

"ವಿಷನ್ ೨೦೨೦ಯ ಕೆಲಸಗಳು ಕರುಣೆಗಿಂತ ಹೆಚ್ಚು ಕಾರಣದಿಂದ ಪ್ರಚೋದಿತವಾದವು" ಮತ್ತೊಬ್ಬ ಸದಸ್ಯ ವಿವರಿಸುತ್ತಾರೆ.ಒಬ್ಬ ಮನುಷ್ಯನಿಗೆ ಮೀನು ಕೊಟ್ಟರೆ ಒಂದು ದಿನದ ಊಟ ಕೊಟ್ಟಂತೆ, ಆದರೆ ಮೀನು ಹಿಡಿಯಲು ಕಲಿಸಿದರೆ, ಇಡೀ ಜೀವನಕ್ಕೆ ಆಧಾರ ಕೊಟ್ಟಂತೆ ಇದೇ ಈ ಸಂಸ್ಥೆಯ ನಂಬಿಕೆ.ಹಾಗಾಗಿ ಇಲ್ಲಿ ದೈನಂದಿನ ಖರ್ಚು ವೆಚ್ಚಕ್ಕೆ, ಊಟ, ಬಟ್ಟೆಗಳಿಗೆ ಹಣ ಸಹಾಯ ಮಾಡುವುದಿಲ್ಲ.ಬದಲು ಹಲವಾರು ಜನ, ಹಲವಾರು ವರ್ಷಗಳು ಉಪಯೋಗಿಸಬಹುದಾದ ವ್ಯವಸ್ಥೆಗಳಿಗೆ ಹಣ ನೀಡುತ್ತದೆ, ಉದಾಹರಣೆಗೆ ವೀಲ್ ಚೇರ್ಗೆ ಬೇಕಾದ ಇಳಿಜಾರು,ಸಾರ್ವಜನಿಕ ಶೌಚಾಲಯಗಳು,ವಿದ್ಯುತ್ ಜನರೇಟರ್,ಆಂಬ್ಯುಲೆನ್ಸ್,ಅಂಗವಿಕಲ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಅನುವಾದ ವ್ಯಾನ್ ಇಂತಹ ಹಲವಾರು ಉಪಯುಕ್ತ ಯೋಜನೆಗಳಿಗೆ ವಿಷನ್ ೨೦೨೦ ನೆರವು ನೀಡಿದೆ.ಈ ಸೌಲಭ್ಯಗಳ ಸದುಪಯೋಗದ ಬಗ್ಗೆ ಸಹ ಸಂಸ್ಥೆ ಪ್ರತಿ ವರ್ಷವೂ ಮಾಹಿತಿ ಪಡೆಯುತ್ತದೆ.

'ವಿಷನ್ ೨೦೨೦' ಹೆಸರಿನ ಆಯ್ಕೆಗೆ ಕಾರಣವೇನೆಂದರೆ ನೇತ್ರ ತಜ್ಞರ ಪ್ರಕಾರ ಪರಿಪೂರ್ಣವಾಗಿರುವ ದೃಷ್ಟಿಯನ್ನು ವಿಷನ್ ೨೦೨೦ ಎನ್ನುತ್ತಾರೆ. ಅದೇ ರೀತಿ ಸಂಸ್ಥೆಗೂ ಆರೋಗ್ಯಕರ ದೃಷ್ಟಿಯಿರಲೆಂಬುದು ಸದಸ್ಯರ ಆಶಯ.ಭಾರತದಲ್ಲಿ ಅಲ್ಲದೆ, ನೇಪಾಳ, ಸೊಮಾಲಿಯಗಳಿಗೂ ಸಹಾಯ ಹಸ್ತ ಚಾಚಿರುವ ಈ ಸಂಸ್ಥೆಯಲ್ಲಿ, ಜಾತಿ,ಧರ್ಮ, ದೇಶಗಳ ಗಲಾಟೆಯಿಲ್ಲ.ಜವಾಬ್ದಾರಿಯುತ ಸಾಮಾಜಿಕ ಕಾರ್ಯಗಳಲ್ಲಿ ನಂಬಿಕೆ ಉಳ್ಳ ಎಲ್ಲರಿಗೂ ಸ್ವಾಗತವಿದೆ.ಕೇವಲ ಕೊಡುಗೈ ಇಂದ ದಾನ ಮಾಡುವುದಲ್ಲದೆ ನೀವು ಸಂಸ್ಥೆ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು ಹಾಗೂ ಸಮರ್ಪಕವಾದ ಯೋಜನೆಗಳನ್ನೂ ಸೂಚಿಸಬಹುದು.

ಈ ವರ್ಷದ ದೀಪಾವಳಿ ಡಿನ್ನರ್:

ಶನಿವಾರ, ೨ ನವೆಂಬರ್

ಡಾನ್ ಮೋರ್ ಕಮೂನಿಟಿ ಸೆಂಟರ್, ನಾರ್ತ್ ರಾಕ್ಸ್ ರೋಡ್

ಕಾರ್ಲಿಂಗ್‌ಫೋರ್ಡ್ ೨೧೧೮

ಪ್ರವೇಶ ದರ: ೩೦,

ಕುಟುಂಬ ದರ:೧೦೦( ೨ ಮಕ್ಕಳ್ಳು ಹಾಗೂ ೨ ವಯಸ್ಕರು)

ಹೆಚ್ಚಿನ ವಿವರಗಳಿಗೆ www.vision2020.org.au ಭೇಟಿ ನೀಡಿ.

# ವಿಜ್ಞಾನ ಸತ್ಯ

## ಮಾನವನ ದೇಹದ ಬಗ್ಗೆ ಒಂದಷ್ಟು ಮಾಹಿತಿ



ಸಂಕಲನ: ಬದರಿ ತ್ಯಾಮಗೊಂಡ್ಲು

- ಮಾನವ ದೇಹದಲ್ಲಿ ಬಳಸಲ್ಪಡುವ ಆಮ್ಲಜನಕದ ಕಾಲು ಭಾಗ ಕೇವಲ ಮೆದುಳು ಬಳಸುತ್ತದೆ
- ಕೆಂಪು ರಕ್ತಕಣಗಳು ದೇಹದ ಸುತ್ತ ಆಮ್ಲಜನಕವನ್ನು ಸಾಗಿಸುವ ವಾಹನಗಳಾಗಿವೆ
- ನಿಮ್ಮ ಮೂಗು ಮತ್ತು ಕಿವಿಗಳು ನಿಮ್ಮ ಇಡೀ ಜೀವನ ಪೂರ್ತಿ ಬೆಳೆಯುತ್ತಲೇ ಇರುತ್ತದೆ
- ದೇಹದ ಬಹುತೇಕ ಭಾಗ ಬೆಳೆದಂತೆ ಕಣ್ಣು ಬೆಳೆಯದೆ ಹುಟ್ಟಿದಾಗ ಇದ್ದ ಗಾತ್ರದಲ್ಲಿ ಇರುವುದು (ಕೇವಲ ಕೆಲವು ಮಿಲಿ ಮೀ.ವ್ಯತ್ಯಾಸ)
- ತಿನ್ನುವ ಆಹಾರ ಸಂಪೂರ್ಣವಾಗಿ ಜೀರ್ಣಿಸಿಕೊಳ್ಳಲು ಸುಮಾರು 12ಗಂಟೆಗಳ ಕಾಲ ತೆಗೆದುಕೊಳ್ಳುತ್ತದೆ
- ಮನುಷ್ಯರ ಚರ್ಮದ ಬಣ್ಣ ದೇಹದಲ್ಲಿ ಉತ್ಪಾದಿಸುವ ಮೆಲನಿನ್ ಎಂಬ ವರ್ಣ ದ್ರವ್ಯ ನಿರ್ಧರಿಸುತ್ತದೆ. ಮೆಲನಿನ್ ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ ಕಪ್ಪು ಚರ್ಮವಿದ್ದು ಮೆಲನಿನ್ ಕಮ್ಮಿ ಆದಂತೆಲ್ಲ ಚರ್ಮದ ಬಣ್ಣ ತಿಳಿಯಾಗುತ್ತ ಹೋಗುತ್ತದೆ (ಹಾಗೆ ಮೆಲನಿನ್ ಅಂಶ ಕಮ್ಮಿ ಇದ್ದರೆ ರೋಗ ನಿರೋಧಕ ಶಕ್ತಿಯು ಕೂಡ ಕಮ್ಮಿ ಎಂದು ಹೇಳಲಾಗುತ್ತದೆ)
- ಬಾಯಿಂದ ಹೊಟ್ಟೆಗೆ ತಿಂದ ಪದಾರ್ಥವು ಹೋಗಬೇಕಾದರೆ 7 ಸೆಕೆಂಡ್ ಬೇಕಾಗುತ್ತದೆ. ಹಾಗಾಗಿ ಸಾವಕಾಶವಾಗಿ ಊಟ ಮಾಡಿ.
- ನಾಲಿಗೆಯ ಸ್ನಾಯು ದೇಹದ ಅತಿ ಗಟ್ಟಿಯಾದ ಸ್ನಾಯುಗಳಲ್ಲಿ ಒಂದು
- ಕೋಪ ಮಾಡಿಕೊಳ್ಳುವುದಕ್ಕೆ ನಗುವುದಕ್ಕಿಂತ ಹೆಚ್ಚು ಸ್ನಾಯುಗಳು (Muscles) ಉಪಯೋಗವಾಗುತ್ತದೆ. ಸದಾ ನಗುತ್ತಲಿರಿ !

# ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆ ಆಶ್ರಯದಲ್ಲಿ, ಸುಗಮ ಗಾನ ಸಮಾಜ ಅರ್ಪಿಸುತ್ತಿದೆ

**ದಸರಾ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭ.**

WattleGrove Public School NSW 2173
ದಿನಾಂಕ 09-11-2013 ಸಂಜೆ 5.30 ಕ್ಕೆ
ಖ್ಯಾತ ಹಾಸ್ಯಗಾರ ರಿಚರ್ಡ್ ಲೂಯಿಸ್ ಮತ್ತು ಸ್ಥಳೀಯರಿಂದ ಮನರಂಜನಾ ಕಾರ್ಯಕ್ರಮ. ವಿವರಗಳು www.sugamakannada.com ನಲ್ಲಿ

**ತಲ್ಲಣ – ಚಲನಚಿತ್ರ**

ತಾರಾಗಣ: ಕೆ.ಎಸ್.ಶ್ರೀಧರ್, ನಿರ್ಮಲಾ, ನಾಗೇಂದ್ರ ಶಾ, ಚಿತ್ರಕತೆ, ನಿರ್ದೇಶನ: ಸುದರ್ಶನ್. ಎನ್.
ಸ್ಥಳ : Hurstville Civic Theatre, Hurstville,
ಭಾನುವಾರ Oct 27th , 4 ಗಂಟೆಗೆ
ಪ್ರವೇಶ: $15 (ಮಕ್ಕಳು ಹಾಗು ಇತರರಿಗೆ: $12)
**ಟಿಕೆಟ್‌ಗಳಿಗೆ ಸಂಪರ್ಕಿಸಿ:**
ವೀಣಾ ಸುದರ್ಶನ್ : 0410 432 528, ಸ್ಮಿತಾ ಮೇಲ್ಕೋಟೆ : 0488295837, ನಾರಾಯಣ : 0423 634 979
ಸುದರ್ಶನ್ : 0414 992 528

**Deepavali Fair**

Organised by Hindu council of Australia

Venue:
Sydney Olympic Park Athletic Centre

Date:
Sunday 26th Oct from 12 PM – 8:30 PM

ENTRY:
$7 per person

MultiCultural Dances, Ravan Effigy, Fireworks.

ನಮ್ಮ
ಸುತ್ತಾ
ಮುತ್ತಾ

**Vision 2020 Diwali Dinner**

Supporting Vision 2020
(www.vision2020.org.au)

Date: Saturday Nov 2nd 2013
Time: 6:45 start

Location: The Don Moore community centre
North Rocks Road
Carlingford, NSW2118

Tickets $30 per person, $100 per family
Includes Multicultural programme and 3 course dinner

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ, ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.